ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 39 RNI Number : KNKAN/25/A2770 12-02-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :39 ರಾಯಚೂರು 12-02-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ಯಡಿಯೂರಪ್ಪ ಆಪ್ತನಿಗೆ ನಿಗಮಮಂಡಳಿ ಅಧ್ಯಕ್ಷ, ರಾಜ್ಯ ಸಚಿವ ದರ್ಜೆ ಸ್ಥಾನಮಾನ

ಶಿವಮೊಗ್ಗ: ರಾಜ್ಯ ಸರ್ಕಾರ ನಿಗಮ - ಮಂಡಳಿಯ ಅಧ್ಯಕ್ಷರ ಅಧಿಕಾರವಧಿಯನ್ನು ವಿಸ್ತರಿಸಿದ ಪಟ್ಟಿ ಬಿಡುಗಡೆ ಮಾಡಿದೆ. ಈ ಪಟ್ಟಿಗೆ ಕಾಂಗ್ರೆಸ್ ನಾಯಕರುಗಳೇ ಗರಂ ಆಗಿದ್ದರೆ, ಬಿಜೆಪಿಯವರು ಖುಷಿಯಾಗಿದ್ದಾರೆ.

ಕಾರಣ, ನಿಗಮ ಮಂಡಳಿಯ ಪಟ್ಟಿಯಲ್ಲಿ ಬಿಜೆಪಿಯ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಆಪ್ತರಾದ ಬಿ.ಡಿ.ಭೂಕಾಂತ್ ಅವರ ಹೆಸರಿದೆ. ಕಾಂಗ್ರೆಸ್ ಪಟ್ಟಿಯಲ್ಲಿ ಬಿಜೆಪಿಯ ಹೆಸರು ಬಂದಿರುವುದಕ್ಕೆ ಕಾಂಗ್ರೆಸ್ ಮುಖಂಡರು ಗರಂ ಆಗಿದ್ದಾರೆ.

ರಾಜ್ಯ ಸರ್ಕಾರದ ಪಟ್ಟಿಯಲ್ಲಿ 54 ಜನರ ಹೆಸರಿದೆ. ಇದರಲ್ಲಿ 53 ಜನರ ಹೆಸರಿಗೆ ಯಾವುದೇ ವಿರೋಧ ವ್ಯಕ್ತವಾಗಿಲ್ಲ. ಆದರೆ, 54ನೇ ಹೆಸರಿಗೆ ಜಿಲ್ಲಾ ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆ ಹಾಗೂ ಆಕ್ರೋಶಕ್ಕೆ ಕಾರಣವಾಗಿದೆ.

ಬಿ.ಡಿ.ಭೂಕಾಂತ್ ಅವರನ್ನು ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾಮಂಡಳಿ



ನಿಯಮಿತದ ಅಧ್ಯಕ್ಷರಾಗಿ ಘೋಷಿಸಿದೆ. ಅಲ್ಲದೇ ಇವರಿಗೆ ರಾಜ್ಯ ಸಚಿವರ ಸ್ಥಾನಮಾನಕ್ಕೆ ಅನ್ವಯವಾಗುವಂತಹ ಸೌಲಭ್ಯ ಒದಗಿಸುವಂತೆ ಆಡಳಿತ ಇಲಾಖೆಗಳಿಗೆ ಸೂಚಿಸಿದೆ. ಬಿಜೆಪಿ ಕಾರ್ಯಕರ್ತರಾಗಿರುವ ಬಿ.ಡಿ.ಭೂಕಾಂತ್ ಅವರಿಗೆ ಸರ್ಕಾರ ನಿಗಮ ಮಂಡಳಿಯ ಅಧ್ಯಕ್ಷ ಸ್ಥಾನ ಹಾಗೂ ರಾಜ್ಯ ಸಚಿವ ಸ್ಥಾನಮಾನ ನೀಡುವ ಆದೇಶ ಜಿಲ್ಲಾ ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಕೆಲ ಮುಖಂಡರು ಕೆಪಿಸಿಸಿ ನಾಯಕರ ವಿರುದ್ಧ ಬಹಿರಂಗವಾಗಿ ಅಲ್ಲದೇ ಹೋದರೂ, ಆಂತರಿಕವಾಗಿ ಕಿಡಿಕಾರುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಈ ಕುರಿತು ಮಾತನಾಡಿದ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್.ಪ್ರಸನ್ನ ಕುಮಾರ್ ಸ್ಪಷ್ಟನೆ ನೀಡಿದ್ದಾರೆ. ಬಿ.ಡಿ.ಭೂಕಾಂತ್ ಬಿಜೆಪಿ ಕಾರ್ಯಕರ್ತರು. ಅವರು ಮಾರಾಟ ಮಹಾಮಂಡಳದಲ್ಲಿ ಇರುವುದು ಸತ್ಯ. ಆದರೆ, ಅವರಿಗೆ ನಿಗಮಮಂಡಳಿಯಂತೆ ಅಧ್ಯಕ್ಷ ಸ್ಥಾನ ನೀಡಿರುವುದು ಸರಿ ಇಲ್ಲ ಎಂದು ಸಂಬಂಧಪಟ್ಟವರಿಗೆ ಈಗಾಗಲೇ ತಿಳಿಸಲಾಗಿದೆ. ಅದಷ್ಟು ಬೇಗ ಇನ್ನೊಂದು ಪಟ್ಟಿ ಬಿಡುಗಡೆಯಾಗಲಿದೆ ಎಂದು ತಿಳಿಸಿದ್ದಾರೆ.

ಗೃಹ ಸಚಿವ ಜಿ.ಪರಮೇಶ್ವರ್ ಅವರು ಇತ್ತೀಚೆಗೆ ಈ ಬಗ್ಗೆ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ 54 ಜನರಿಗೆ ನಿಗಮ, ಮಂಡಳಿ ಸದಸ್ಯರಿಗೆ ಸಚಿವ ದರ್ಜೆ ಸ್ಥಾನಮಾನ ಕೊಟ್ಟಿರುವ ವಿಚಾರವಾಗಿ ಪ್ರತಿಕ್ರಿಯಿಸಿದ್ದರು. ಸಿಎಂ ಅವರು ಈ ಹಿಂದೆ ಬೋರ್ಡ್ ಅಧ್ಯಕ್ಷರಿಗೆ ಏನು ಸವಲತ್ತು ಕೊಟ್ಟಿದ್ದರೋ ಅದೇ ಸ್ಥಾನಮಾನ ಕೊಡಬೇಕು. ಈ ಹಿಂದೆ ಇರೋ ರೀತಿಯೇ ಈಗಲೂ ಸ್ಥಾನಮಾನ ಕೊಟ್ಟಿದ್ದಾರೆ. ಇದರಲ್ಲಿ ಹೊಸದೇನಿಲ್ಲ ಎಂದಿದ್ದರು.

ಶಿವರಾತ್ರಿ ಹಬ್ಬದ ಬಳಿಕ ಬಜೆಟ್ ದಿನಾಂಕದ ಕುರಿತು ನಿರ್ಧಾರ: ಸಿಎಂ

ಬೆಂಗಳೂರು,ಫೆ.11-

ಮಹಾಶಿವರಾತ್ರಿ ಹಬ್ಬದ ಬಳಿಕ ರಾಜ್ಯ ಬಜೆಟ್ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಇಂದು ಬೆಳಗ್ಗೆ ನಗರದ ಶಕ್ತಿ ಭವನದಲ್ಲಿ ವಿವಿಧ ಇಲಾಖೆಗಳೊಂದಿಗೆ ಅವರು ಸಭೆ ನಡೆಸಿದರು. ಇದಕ್ಕೂ ಮುನ್ನ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಸಿಎಂ, ಹಬ್ಬದ ಬಳಿಕ ಬಜೆಟ್ ದಿನಾಂಕ ತಿಳಿಸಲಾಗುವುದು ಎಂದರು.

ಕೆಲ ಶಾಸಕರು ವಿದೇಶ ಪ್ರವಾಸ ಕೈಗೊಂಡಿರುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸ್ವಂತ ಖರ್ಚಿನಲ್ಲಿ ಶಾಸಕರು ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ನಾಯಕತ್ವ ಬದಲಾವಣೆ ಕುರಿತ ಪ್ರಶ್ನೆಗೆ ಅಸಮಾಧಾನಗೊಂಡ ಸಿದ್ದರಾಮಯ್ಯ ಅವರು ಪದೇ ಪದೆ ಇದೇ ವಿಷಯದ ಬಗ್ಗೆ ಕೇಳಬಾರದು. ಈ ವಿಚಾರದಲ್ಲಿ ಹಲವು ಬಾರಿ ಸ್ಪಷ್ಟನೆ ನೀಡಿದ್ದೇನೆ. ನಾಯಕತ್ವ ಬದಲಾವಣೆ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನಿಸಿದರೆ ಅದರಂತೆ ನಾನು ಮತ್ತು ಉಪಮುಖ್ಯಮಂತ್ರಿಗಳಿಬ್ಬರೂ ನಡೆದುಕೊಳ್ಳುತ್ತೇವೆ ಎಂದರು.

ರಾಮಯ್ಯ ಅವರಿಗೆ ಅಂತಿಮ ನಮನ ಸಲ್ಲಿಸಿದ ಸಿಎಂ: ಮಂಗಳವಾರ ನಿಧನರಾದ ಹಿರಿಯ ಪತ್ರಕರ್ತ, ಮಾಜಿ ವಿಧಾನ ಪರಿಷತ್ ಸದಸ್ಯರೂ ಆಗಿದ್ದ ರಾಮಯ್ಯ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಮೃತರ ಅಂತ್ಯಕ್ರಿಯೆ ನಗರದ ಹರಿಶ್ಚಂದ್ರ ಘಾಟ್‌ನಲ್ಲಿ ಸರ್ಕಾರಿ ಗೌರವದೊಂದಿಗೆ ನೆರವೇರಿತು.



ಹೈಕಮಾಂಡ್ ಏನು ಹೇಳುತ್ತದೆ ಅದರಂತೆ ನಡೆದುಕೊಳ್ಳುತ್ತೇನೆ - ಸಿಎಂ ಸಿದ್ದರಾಮಯ್ಯ: ಮಂಗಳವಾರ ವಿಧಾನಸೌಧದಲ್ಲಿ ಮಾತನಾಡಿದ್ದ ಸಿಎಂ ಸಿದ್ದರಾಮಯ್ಯ ಅವರು, ನಾನು ಸಿದ್ದರಾಮಯ್ಯ ಕದ್ದು ಮುಚ್ಚಿ ಮಾತನಾಡಿಲ್ಲ, ಹೈಕಮಾಂಡ್ ಮುಂದೆ ಮಾತಾಡಿದ್ದೇವೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿ, ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಹೈಕಮಾಂಡ್ ಏನು ಹೇಳುತ್ತದೆ ಅದರಂತೆ ನಡೆದುಕೊಳ್ಳುತ್ತೇನೆ. ಅವರು ಏನು ಹೇಳುತ್ತಾರೋ ಅವರನ್ನೇ ಕೇಳಿ ಎಂದಿದ್ದರು.

ದೆಹಲಿಗೆ ಹೋಗುತ್ತೀರಾ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿ,

3ನೇ ಪುಟಕ್ಕೆ

ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ

ಕಂದಾಯ ಇಲಾಖೆಯ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸಿ: ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಸೂಚನೆ

ರಾಯಚೂರು ಫೆ.11

ಕಂದಾಯ ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ತರಲಾಗಿದ್ದು, ಇಲಾಖೆಯಲ್ಲಿನ ಸಾರ್ವಜನಿಕ ಸ್ನೇಹಿ ಎಲ್ಲ ಕಾರ್ಯಕ್ರಮಗಳ ಸರಿಯಾದ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಫೆ.11ರಂದು ನಡೆದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಂದಾಯ ಇಲಾಖೆಯಲ್ಲಿ ಮೊದಗಿಲಿಗಿಂತ ಅತೀ ಹೆಚ್ಚು ಬದಲಾವಣೆಯಾಗಿದೆ. ಮಹತ್ವದ ಎಲ್ಲ ಕಡತಗಳನ್ನು ಡಿಜಿಟಲ್ ವ್ಯವಸ್ಥೆಗೆ ಮಾರ್ಪಡಿಸಲಾಗುತ್ತಿದೆ. ಇದರಿಂದಾಗಿ ಸಾರ್ವಜನಿಕರಿಗೆ ಪ್ರತಿಯೊಂದು ಮಾಹಿತಿಯು ಕ್ಷಣಾರ್ಧದಲ್ಲಿ



ದೊರೆಯುವಂತಾಗಿದೆ. ಅದರಂತೆ ಕಂದಾಯ ಇಲಾಖೆಯ ಯೋಜನೆಗಳು, ಕಾರ್ಯಕ್ರಮಗಳ ಕುರಿತು ಮಾಹಿತಿಯನ್ನು ಕಂದಾಯ ಇಲಾಖೆಯ ಕಚೇರಿಗಳಲ್ಲಿ ಪ್ರದರ್ಶನ ಮಾಡಬೇಕು. ಮೃತರ ಹೆಸರಲ್ಲಿರುವ ಜಮೀನುಗಳನ್ನು ವಾರಸುದಾರರಿಗೆ ನೋಂದಣಿ ಮಾಡಿಕೊಡಲು ಕಂದಾಯ ಇಲಾಖೆಯಿಂದ ರೈತರ ಮನೆ ಬಾಗಿಲಿಗೇ ಇ-ಪೌತಿ ಆಂದೋಲನದಡಿ ಜಿಲ್ಲೆಯಲ್ಲಿ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಈ ಬಗ್ಗೆ ಪ್ರತಿಯೊಂದು ಗ್ರಾಮಗಳಲ್ಲಿ ಮಾಹಿತಿ ನೀಡಿ ಜಾಗೃತಿ ಮೂಡಿಸಬೇಕು ಎಂದು ಅವರು ಸೂಚನೆ ನೀಡಿದರು.

ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಕಂದಾಯ ಇಲಾಖೆಗೆ ಸಂಬಧಿಸಿದತೆ ದಾಖಲಾದ ಅರೆ ನ್ಯಾಯಿಕ ಪ್ರಕರಣಗಳನ್ನು ಬೇಗನೇ ಇತ್ಯರ್ಥಪಡಿಸಬೇಕು. ಕಂದಾಯ ದಾಖಲೆಗಳ ಡಿಜಿಟಲೀಕರಣಕ್ಕಾಗಿ ಜಿಲ್ಲೆಯಲ್ಲಿ ಈಗಾಗಲೇ ಲಕ್ಷಕ್ಕೂ ಹೆಚ್ಚು ಫೈಲ್‌ಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲಾಗಿದೆ. ಈ ಕಾರ್ಯ ಇನ್ನಷ್ಟು ವೇಗವಾಗಬೇಕು ಎಂದು ಅವರು ನಿರ್ದೇಶನ ನೀಡಿದರು.

ಆಯಾ ತಾಲೂಕುಗಳ ತಹಶೀಲ್ದಾರರು ಸಾರ್ವಜನಿಕರ ದಾಖಲೆಗಳನ್ನು ಸಂರಕ್ಷಿಸುವಲ್ಲಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರ ಎಲ್ಲಾ ದಾಖಲೆಗಳನ್ನು ಡಿಜಿಟಲೀಕರಣ ಮಾಡುವುದು ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಇದರಿಂದ ಕುಳಿತಲ್ಲಿಯೇ ಬೆರಳ ತುದಿಯಲ್ಲಿ

3ನೇ ಪುಟಕ್ಕೆ



ಕಾನೂನು ಅರಿವು ನೆರವು ಕಾರ್ಯಕ್ರಮ
ಜೀತ ಪದ್ಧತಿ ನಿರ್ಮೂಲನೆಗೆ ಕೈಜೋಡಿಸಿ: ನ್ಯಾ.ಹೆಚ್.ಎ.ಸಾತ್ವಿಕ್ ಸಲಹೆ

ರಾಯಚೂರು ಫೆಬ್ರವರಿ 11

ಜೀತ ಪದ್ಧತಿಯು ದೊಡ್ಡದಾದ ಸಾಮಾಜಿಕ ಪಿಡುಗಾಗಿದ್ದು, ಇದರ ನಿರ್ಮೂಲನೆಗಾಗಿ ಎಲ್ಲರು ಕೈಜೋಡಿಸಬೇಕೆಂದು ಗೌರವಾನ್ವಿತ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್.ಎ.ಸಾತ್ವಿಕ್ ಅವರು ಹೇಳಿದರು.

ಫೆ.10ರ ಮಂಗಳವಾರ ದಂದು ತಾಲೂಕಿನ ಚಂದ್ರಬಡಾ ರಸ್ತೆಯ ಕಡ್ಡಂದೊಡ್ಡಿ ವ್ಯಾಪ್ತಿಯ ವಿ.ಬಿ.ಎಸ್ ಇಟ್ಟಿಗೆ ಭಟ್ಟಿಯಲ್ಲಿ ಜೀತ ಪದ್ಧತಿ ನಿರ್ಮೂಲನೆ ದಿನಾಚರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮಕ್ಕೆ ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಜೀತ ಪದ್ಧತಿಗೆ ಬಡತನವೇ ಮೂಲ ಕಾರಣವಾಗಿದೆ. ಕಾರ್ಮಿಕರಿಗಾಗಿಯೇ ಇರುವ ಕಾಯ್ದೆ ಕಾನೂನುಗಳನ್ನು ಅರಿಯುವುದು ಅತ್ಯಂತ ಮಹತ್ವವಾಗಿದ್ದು, ಕಾರ್ಮಿಕರಿಗಾಗಿಯೇ ಲಭ್ಯವಿರುವ ಉಚಿತ ಕಾನೂನು ಸಲಹೆ ಮತ್ತು ಸೇವೆಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಬೇಕು. ಹಾಗೂ ತೊಂದರೆಯಾದಲ್ಲಿ ಸಹಾಯವಾಣಿ ಸಂಖ್ಯೆ 15100ಗೆ ಕರೆ ಮಾಡಿ ಕಾನೂನು ಸೇವೆಗಳನ್ನು

3ನೇ ಪುಟಕ್ಕೆ

ಸರ್ಕಾರ ಪದವಿ ಪೂರ್ವ ಕಾಲೇಜಿನ ಪಿಯು ವಿದ್ಯಾರ್ಥಿಗಳಿಗೆ ಬಿಳ್ಕೊಡುಗೆ

ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ಅಭ್ಯಾಸ ಮಾಡಿ - ಹಾಜಿಚೌದ್ರಿ



ಸಿರವಾರ.ಫೆ.11-

ವಿದ್ಯಾರ್ಥಿ ಜೀವನದಲ್ಲಿ ಸಮಯದ ಸದುಪಯೋಗ ಮಾಡಿಕೊಂಡು ಚೆನ್ನಾಗಿ ಅಭ್ಯಾಸ ಮಾಡಿದರೆ, ಯಶಸ್ಸು ನಿಮ್ಮದಾಗಿ ಹೆತ್ತವರ ಆಸೆ ಈಡೇರಿಸಿದವರು ನೀವಾಗಬೇಕು ಎಂದು ಪಟ್ಟಣ ಪಂಚಾಯತಿ ಅಧ್ಯಕ್ಷ ಹಾಜಿಚೌದ್ರಿ ಹೇಳಿದರು.

ಪಟ್ಟಣದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪಿಯು ಸಿ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ ಬಿಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿ ಜೀವನದಲ್ಲಿ ಅಂಕಗಳಿಸುವುದು ಎಷ್ಟು ಮುಖ್ಯವೋ ಸಂಸ್ಕಾರವನ್ನು ಕಲಿಯುವುದು ಮುಖ್ಯ ಶಿಸ್ತು, ಸಮಯ ಪ್ರಜ್ಞೆ ಮತ್ತು ಜೀವನದಲ್ಲಿ ಯಶಸ್ಸು ಗಳಿಸಲು ಆತ್ಮವಿಶ್ವಾಸ ಬಹಳ ಪ್ರಾಮುಖ್ಯ ಸಮಯ ಎಲ್ಲಾರಿಗೂ ಒಂದೇ ರೀತಿ ಇರುತ್ತದೆ. ಅದನ್ನು ಹೇಗೆ ಬಳಕೆ ಮಾಡಿಕೊಂಡು ಮುಂದೇ ಸಾಗಬೇಕು. ವಿದ್ಯಾರ್ಥಿಗಳು ಉತ್ತಮ ಕಲಿಕೆಯೊಂದಿಗೆ ತೇರ್ಗಡೆಯಾಗಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದರೆ ಕಾಲೇಜಿಗೆ, ಉಪನ್ಯಾಸಕರಿಗೆ ಮತ್ತು ಪೋಷಕರಿಗೆ ಸಂತೋಷ. ಆದ್ದರಿಂದ ಪ್ರತಿಯೊಬ್ಬರು ಪ್ರತಿ ನಿತ್ಯ ಓದುವದು, ಪಠ್ಯವನ್ನು ಮನದಟ್ಟಾಗಿ ಕೇಳುವದು ಮುಖ್ಯ. ಸದ್ಯ ಮುಂದಿನ ವಿದ್ಯಾಭ್ಯಾಸಕ್ಕೆ ಹೋಗುವ ನಿಮ್ಮ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದರು.

ನವಲಕಲ್ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರು ರಾಜಶೇಖರ ದಿನ್ನಿ ಅಥಿತಿಯಾಗಿ ಭಾಗವಹಿಸಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮೊಬೈಲ್ ಬಿಟ್ಟು ಹೆಚ್ಚು ಹೊತ್ತು ಪುಸ್ತಕ ಓದಿ ಅದೇ ನಿಮ್ಮ ಜೀವನಕ್ಕೆ ದೊಡ್ಡ ಸಂಪತ್ತು ತಂದುಕೊಡುತ್ತದೆ. ಪಿಯುಸಿ ಹಂತದಲ್ಲಿ ಹೆಚ್ಚಿನ ಅಂಕಗಳಿಸಬೇಕು, ಉನ್ನತ ಮಟ್ಟದ ಶಿಕ್ಷಣ ಪಡೆಯಲು

ಅನುಕೂಲವಾಗುತ್ತದೆ, ಉತ್ತಮ ಗುಣಗಳನ್ನು ಹೊಂದಬೇಕು, ತಂದೆ,

3ನೇ ಪುಟಕ್ಕೆ

ಕಾಯಕ ಶರಣರ ವಚನಗಳು ಸಮಾಜಕ್ಕೆ ದಾರಿ ದೀಪವಾಗಿವೆ - ಡಾ. ಬಿರಾದಾರ

ರಾಯಚೂರು,ಫೆ.11-

12ನೆಯ ಶತಮಾನದಲ್ಲಿ ಹಲವಾರು ಶರಣರು ಅನುಭವ ಮಂಟಪದಲ್ಲಿ ಅಣ್ಣ ಬಸವಣ್ಣ ಮತ್ತು ಅಲ್ಲಮಪ್ರಭು ಅವರು ಮಾರ್ಗದರ್ಶನದಲ್ಲಿ ಶರಣರು ಹಲವಾರು ವಚನಗಳನ್ನು ರಚನೆ ಮಾಡಿ ಸಮಾಜದ ಅಂಕು ಡೊಂಕುಗಳನ್ನು ಗೊಡ್ಡು ಸಂಪ್ರದಾಯಗಳನ್ನ ತಿದ್ದುವಲ್ಲಿ ಪ್ರಮುಖ ಪಾತ್ರ ವಹಿಸಿವೆ.ಅದರಂತೆ ಕಾಯಕ ಶರಣರಾದ.ಶಿವಶರಣ ಮಾದಾರ ಚೆನ್ನಯ್ಯ.ಮಾದಾರ ಧೂಳಯ್ಯ. ಡೋಹರ ಕಕ್ಕಯ್ಯ. ಸಮಗಾರ ಅರಳಯ್ಯ. ಉರುಲಿಂಗ ಪೆದ್ದಿ.ಇವರು ತಮ್ಮ ಕಾಯಕ ನಿಷ್ಠೆಯೊಂದಿಗೆ ಹಲವಾರು ವಚನಗಳನ್ನು ರಚನೆ ಮಾಡಿ ಆಗಿನ ಪರಿಸರಕ್ಕೆ ತಕ್ಕಂತೆ ರಚನೆ ಮಾಡಿದ ವಚನಗಳು.ನಮಗಿಂದು ದಾರಿ ದೀಪವಾಗಿವೆ. ಮಾದಾರ ಚೆನ್ನಯ್ಯ ಅಶ್ವಗಳಿಗೆ ಚೋಳನ ರಾಜ್ಯದಲ್ಲಿ ಹುಲ್ಲು ತರುವ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಾ ಕಾಯಕದಲ್ಲಿ ಲಿಂಗ ಪೂಜೆಯನ್ನ ಅನುಸರಿಸಿ ಅವರ ಕಾಯಕ್ಕೆ ಅವರ ಕೆಲಸಕ್ಕೆ. ಕಾರ್ಯಕ್ಕೆ ಶಿವ ದರ್ಶನ ನೀಡಿದನೆಂಬ ಐತಿಹ ಇದೆ. ಅದರಂತೆ ಮಾದಾರ ಧೂಳಯ್ಯ,ಕಾಮಧೂಮ ಧೂಳೇಶ್ವರ,ಎಂಬ ವಚನಾಂಕಿತವನ್ನು



ಇಟ್ಟುಕೊಂಡು ವಚನಗಳನ್ನು ರಚನೆ ಮಾಡಿದ್ದಾರೆ.ತಮ್ಮ ಪಾದರಕ್ಷ ಚರ್ಮ ಹದ ಮಾಡುವ ಕಾಯಕದಲ್ಲಿ ಅತ್ಯಂತ ನಿಷ್ಠೆಯನ್ನು ಹೊಂದಿದ್ದರು.ಅಣ್ಣ ಬಸವಣ್ಣ ಇವರ ಬಗ್ಗೆ ಬಹಳ ಅಪಾರವಾದ ಗೌರವವನ್ನು ಹೊಂದಿದ್ದನು. ಸಮಗಾರ ಅರಳಯ್ಯ ಕಲ್ಯಾಣದಲ್ಲಿ ಪಾದರಕ್ಷ ಮಾಡುವ ಕಾಯಕವನ್ನ ಇವರ ಧರ್ಮಪತ್ನಿಯಾದ ಕಲ್ಯಾಣಿ ಮಗ ಶೀಲವಂತ ಇವರು ತಮ್ಮ ಕಾಯಕ್ಕೆ ಕೆಲಸಕ್ಕೆ ನಿಷ್ಠಿಯನ್ನು ಹೊಂದಿದ್ದರು. ಜಗಜ್ಯೋತಿ ಅಣ್ಣ ಬಸವಣ್ಣನ ಬಗ್ಗೆ ಅಪಾರವಾದ ಭಕ್ತಿಯನ್ನು ಹೊಂದಿದ್ದ ಇವರು.ತಮ್ಮ ಬಲತಡೆಯ ಚರ್ಮ ತನ್ನ ಹೆಂಡತಿಯ ಎಡತೊಡಯ ಚರ್ಮದಿಂದ ಪಾದರಕ್ಷೆಯನ್ನು ಮಾಡಿ ಬಸವಣ್ಣನಿಗೆ ಕೊಟ್ಟಾಗ.ಬಸವಣ್ಣ ಈ ಪಾದರಕ್ಷಗಳನ್ನು ನನಗೆ ಬೇಡ ಕೂಡಲಸಂಗಮ ದೇವನಿಗೆ ಮೀಸಲೆಂದು ಹರಳಯನವರಿಗೆ ಹೇಳುತ್ತಾರೆ.ಈತನ ಭಕ್ತಿ. ಕಾಯಕನಿಷ್ಠಗೆ ಮಧುವರಸ ಸಹ ಶಿವಭಕ್ತನಾಗಿ ಪರಿವರ್ತನಾಗುತ್ತಾನೆ. ಉರ ಲಿಂಗ ಪೆದ್ದಿ ಇವರಿಗೆ ಊರು ಲಿಂಗ ಎಂದುಕರೆಯುತ್ತಿದ್ದರಂದು ತಿಳಿದು ಬರುತ್ತದೆ. ಪ್ರಾರಂಭದಲ್ಲಿ ಕಳುವು ಮಾಡುತ್ತಿದ್ದ. ಈತ ಒಂದು ಮನೆಗೆ ಕಳುವು ಮಾಡಲು ಹೋದಂತ.ಸಂದರ್ಭದಲ್ಲಿ ಗುರುಲಿಂಗ ದೇವನೆಂಬ ಗುರು. ಸೂರ್ಯನೆಂಬ ಭಕ್ತನಿಗೆ ಲಿಂಗ ದಿಕ್ಷೆಯನ್ನು ಕೊಡುವಾಗ ಪೆದ್ದಣ್ಣ ಲಿಂಗದಿಕ್ಷೆಯನ್ನು ಕಿಟಕಿಯಿಂದ.ಗುರು ಕೊಡುವ ಶಿವ ದೀಕ್ಷೆಯನ್ನು ಅದರ

3ನೇ ಪುಟಕ್ಕೆ

ಇಂಥವರು ಇರುತ್ತಾರೆ:: ಲಕ್ಷಾಂತರ ಬೆಲೆಬಾಳುವ ಭೂಮಿ ಶಾಲೆಗೆ ದಾನ, ವೇತನವಿಲ್ಲದೆ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕ ಬಸವರಾಜ ಮಾಲಿಪಾಟೀಲ್

ಕಲ್ಯಾಣ ಅಸ್ತ್ರ:

ದೇವದುರ್ಗ,ಫೆ.11-

ಸರಕಾರಿ ಶಾಲೆಯಲ್ಲಿ ರಚನೆ ಯಾಗುವ ಎಷ್ಟೊ ಎಸ್ಡಿಎಂಸಿಗಳು ಬರುವ ಅನುದಾನದಲ್ಲಿ ನಮಗೇನು ಪಾಲು ಎಂದು ಕಾದುಕುಳಿತು ಶಿಕ್ಷಕರೊಡನೆ ತಕರಾರು ಮಾಡುವ ಹಲವಾರು ಜನರ ನಡುವೆ ಅಪರೂಪದ ವ್ಯಕ್ತಿಗಳು ಇರುವುದುಂಟು ಅಂತಹ ಅಪರೂಪದಲ್ಲಿ ಅಪರೂಪದ ವ್ಯಕ್ತಿ ದೇವದುರ್ಗ ತಾಲೂಕಿನ ಹೇರುಂಡಿ ಗ್ರಾಮದ ಹವ್ಯಾಸಿ ಶಿಕ್ಷಕ ಬಸವರಾಜ ಮಾಲಿಪಾಟೀಲ್

ಸರಕಾರಿ ಶಾಲೆಗಳು ಉಳಿದರೆ ಬಡವರ ಮಕ್ಕಳು ಶಿಕ್ಷಣ ಪಡೆದಾರು ಎನ್ನುವ ಆಲೋಚನೆ ಮಾಡುವ ಕಾಲ



ಬಂದಿದೆ ಏಕೆಂದರೆ ಖಾಸಗಿ ಶಾಲೆಗಲ ಅಬ್ಬರದಲ್ಲಿ ರಾಜ್ಯದಲ್ಲಿ ಹಲವಾರು ಸರಕಾರಿ ಶಾಲೆಗಳು ಬಾಗಿಲು ಮುಚ್ಚುತ್ತಿವೆ ಇದು ಹೀಗೆ ಮುಂದುವರೆದರೆ ಅಪಾಯಕಾರಿ ಕಟ್ಟಿಟ್ಟಬುತ್ತಿ ಎಂಬುದು ವಿಚಾರವಮತರ ಮಾತಾಗಿದೆ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಹೇರುಂಡಿ ಎಂಬ ಪುಟ್ಟ ಗ್ರಾಮ ಈ ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ಇದರಲ್ಲಿ ಒಂದನೇ ತರಗತಿಯಿಂದ ಎಂಟನೆ ತರಗತಿಯವರೆಗೆ ಮಕ್ಕಳು ಶಿಕ್ಷಣ ಪಡೆಯುತಿದ್ದಾರೆ ಇಲ್ಲಿ ಶಾಲೆ ಇದೆ ಮಕ್ಕಳು ಅಕ್ಷರ ಕಲಿಯುತಿದ್ದಾರೆ ಎನ್ನುವುದೆ ಖುಷಿಯ ವಿಚಾರ ಯಾಕೆಂದರೆ ಒಂದು ಹಂತದಲ್ಲಿ ಅಕ್ಷರ ಕಲಿಕೆಯಲ್ಲಿ ಅತ್ಯಂತ ಹಿಂದುಳಿದ ತಾಲೂಕು ಎಂದು ಕರೆಯಲಾಗುತ್ತಿತ್ತು ಇಂತಹ ತಾಲೂಕಿನ ಹೇರುಂಡಿ ಗ್ರಾಮದಲ್ಲಿ ನಮ್ಮ ಪತ್ರಿಕೆಗೆ ಅಪರೂಪದ ವ್ಯಕ್ತಿಯೊಬ್ಬರು ಕಂಡಿದ್ದು ಅವರ ಸೇವೆ ಅದ್ಬುತವಾಗಿದೆ ಅದು ಏನು ಅಂತೀರಾ?

ದೇವದುರ್ಗ ತಾಲೂಕಿನಲ್ಲಿ ನೀರಾವರಿ ಬಂದಿರುವುದರಿದ ಭೂಮಿಯ ಬೆಲೆ ಗಗನಕ್ಕೆ ಏರಿದೆ ಆದರು ಅದನ್ನು ಬದಿಗೆ ಸರಿಸಿ ಬಸವರಾಜ ಮಾಲಿಪಾಟೀಲ್ ತಮ್ಮ ಜಮೀನನ್ನು ಸರಕಾರಿ ಶಾಲೆಗೆ ದಾನ ಮಾಡಿದ್ದಾರೆ ಅಲ್ಲದೆ ಅವರಿಗೆ 65 ವರ್ಷ ವಯಸಾಗಿದ್ದು ಮನೆಯಲ್ಲಿ ಕೂಡದೆ ಶಾಲೆಗೆ ಬಂದು ಮಕ್ಕಳಿಗೆ ಹಿಂದಿ ಭಾಷೆಯ ಪಾಠವನ್ನು ಹೇಳಿಕೊಡುತ್ತಿದ್ದಾರೆ ಸದರಿ ಶಾಲೆಯಲ್ಲಿ ಹಿಂದಿ ಶಿಕ್ಷಕರು ಇಲ್ಲದಿರುವುದರಿಂದ ಆ ಖಾಲಿಸ್ಥಾನವನ್ನು ಮತ್ತು ಇದರಿಂದ ಮಕ್ಕಳು ಹಿಂದಿ ಪಾಠದಿಂದ ವಂಚಿತರಾಗಬಾರದೆಂದು ಯಾವುದೆ ವೇತನವನ್ನು ಪಡೆಯದೆ ವಿದ್ಯಾರ್ಥಿಗಳಿಗೆ ಹಿಂದಿಪಾಠ ಮಾಡುತ್ತಾ ನಮ್ಮೂರಿನ ಮಕ್ಕಳು ಅಕ್ಷರ ಕಲಿಯುವಲ್ಲಿ ಹಿಂದೆ ಬೀಳಬಾರದು ಎಂಬ

3ನೇ ಪುಟಕ್ಕೆ

ಅದ್ದೂರಿಯಾಗಿ ಜರುಗಿದ ದ್ಯಾವಮ್ಮ ದೇವಿಯ ಜಾತ್ರಾ ಮಹೋತ್ಸವ



ಕವಿತಾಳ,ಫೆ.11-

ಪಟ್ಟಣದ ಗ್ರಾಮ ದೇವತೆ ದ್ಯಾವಮ್ಮ ದೇವಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ದೇವಸ್ಥಾನದಲ್ಲಿ ದ್ಯಾವಮ್ಮ ದೇವಿಗೆ ಉಡಿ ತುಂಬಲಾಯಿತು, ಕುಂಕುಮಾರ್ಚನೆ, ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ವಿವಿಧ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು. ಮಂಜುನಾಥ ಕಂಬಾರ, ಅಮರಗುಂಡಪ್ಪ, ಶ್ರೀಶೈಲಪ್ಪ ಪೂಜಾರಿ, ಅಯ್ಯಪ್ಪ, ಮಾನಪ್ಪ ಉಪ್ಪಳ ಅವರು ಪೂಜಾ ಕಾರ್ಯಕ್ರಮ ನಡೆಸಿಕೊಟ್ಟರು.

ಕೆಂಚಮ್ಮ ದೇವಿ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ಆರಂಭವಾದ ನಂತರ ಶ್ರೀಶೈಲಪ್ಪ ಪೂಜಾರಿ ಅವರ ಮನೆಯಿಂದ ಪ್ರಮುಖ ಬೀದಿಗಳ ಮೂಲಕ ದ್ಯಾವಮ್ಮ ದೇವಿ ದೇವಸ್ಥಾನದವರಿಗೆ ಭಾಜಾ ಭಜಂತ್ರಿ, ಡೊಳ್ಳು, ಮಂಗಳ ವಾದ್ಯಗಳೊಂದಿಗೆ ದ್ಯಾವಮ್ಮ ದೇವಿ ಮೂರ್ತಿ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ಕಾಯಿ, ಕರ್ಪೂರ, ನೈವೇದ್ಯ ಅರ್ಪಿಸಿ ಭಕ್ತರು ಪೂಜೆ ಸಲ್ಲಿಸಿದರು. ದೀರ್ಘ ದಂಡನಮಸ್ಕಾರ ಹಾಕಿ ಹರಕೆ ತೀರಿಸಿದರು ಪಟ್ಟಣ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು, ಮಹಿಳೆಯರು, ಮಕ್ಕಳು, ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡರು.

ಫೆ.13 ರಿಂದ 15ರವರೆಗೆ ಹಂಪಿ ಉತ್ಸವ, ವಿನೂತನ ವಿಶೇಷ ಆಚರಣೆ, ಉತ್ಸವ ಯಶಸ್ವಿಗೆ ಜಿಲ್ಲಾಡಳಿತ ಸನ್ನದ್ಧ : ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ



ವಿಜಯನಗರ, ಫೆ.11-

ಹಂಪಿ ಉತ್ಸವವು ಇದೇ ಫೆಬ್ರವರಿ 13 ರಿಂದ 15 ರವರೆಗೆ ನಡೆಯಲಿದೆ. ಪ್ರತಿ ವರ್ಷದಂತೆ ಈ ಭಾರಿಯೂ ವಿಜಯ ನಗರ ಸಾಮ್ರಾಜ್ಯದ ಗತವೈಭವ, ಸುವರ್ಣಯುಗ ವಿಜೃಂಭಣೆಯಿಂದ ಆಚರಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಸಕಲ ರೀತಿಯಲ್ಲೂ ಸನ್ನದ್ಧವಾಗಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿ, ಮಾತನಾಡಿದರು.

ಉತ್ಸವಕ್ಕೆ ಮುಖ್ಯಮಂತ್ರಿ ಅವರು ಫೆಬ್ರವರಿ 13 ರಂದು ಅಧಿಕೃತವಾಗಿ ಚಾಲನೆ ನೀಡುವರು. ಉತ್ಸವದ ಅಂಗವಾಗಿ 5 ವೇದಿಕೆ ನಿರ್ಮಿಸಲಾಗಿದ್ದು, ವೇದಿಕೆ ನಿರ್ಮಾಣ ಕಾರ್ಯ ಕೆಲವೇ ದಿನಗಳಲ್ಲಿ ಮುಕ್ತಾಯವಾಗಲಿದೆ. ಅದರಂತೆ ಫೆಬ್ರವರಿ 7 ರಿಂದಲೇ ಈಗಾಗಲೇ ಹಲವು ಕಾರ್ಯಕ್ರಮ ಆರಂಭವಾಗಿವೆ. ಫೆಬ್ರವರಿ 10 ರಂದು ಬೆಳಿಗ್ಗೆ 8 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಹಂಪಿ ವಿರುಪಾಕ್ಷೇಶ್ವರ ದೇವಸ್ಥಾನದವರೆಗೆ ಬೈಕ್ ರ್‍ಯಾಲಿ, 11 ರಂದು ಸಂಜೆ 6ಕ್ಕೆ ತುಂಗಾ ಆರತಿ, 12 ರಂದು ಬೆಳಗ್ಗೆ 10 ಗಂಟೆಗೆ ಮಯೂರ ಭುವನೇಶ್ವರಿ ಹೋಟೆಲ್ ಆವರಣದಲ್ಲಿ ಹಂಪಿ ಬೈಸ್ಕೆಗೆ ಚಾಲನೆ ದೊರೆಯಲಿದ್ದು, ಮಧ್ಯಾಹ್ನ 3ಕ್ಕೆ ವಡಕರಾಯನ ದೇವಸ್ಥಾನದಿಂದ ಶಾನಭಾಗ ವೃತ್ತದವರೆಗೆ ವಸಂತ ವೈಭವ ಮೆರವಣಿಗೆ ನಡೆಯಲಿದೆ. ಅದೇ ದಿನದಂದು ವಿಶೇಷವಾಗಿ ಶಾನಭಾಗ ವೃತ್ತದಿಂದ ಪುನಿತ್ ರಾಜ್‌ಕುಮಾರ್ ವೃತ್ತದವರೆಗೆ ವಸಂತ ಆರತಿ ಹಮ್ಮಿಕೊಳ್ಳಲಾಗಿದೆ. ಫೆಬ್ರವರಿ 13 ರಂದು ವಿಶ್ವಪಾರಂಪರಿಕ ತಾಣವಾದ ಹಂಪಿ ನಿರ್ವಹಣಾ ಪ್ರಾಧಿಕಾರ ಕಚೇರಿ ಹಿಂಭಾಗ ವಿವಿಧ ತಳಿಗಳ ಎತ್ತುಗಳ ಪ್ರದರ್ಶನ, ರಂಗೋಲಿ ಸ್ಪರ್ಧೆ, ಫಲಪುಷ್ಪ ಪ್ರದರ್ಶನ, ಮತ್ಸ್ಯ ಮೇಳ, ಬೋಟಿಂಗ್, ಹಂಪಿ ವಿಚಾರ ಕುರಿತು ವಿಚಾರ ಸಂಕಿರಣ ಹಾಗೂ ಆಹಾರ ಮೇಳ ಆಯೋಜಿಸಲಾಗಿದೆ. 14 ರಂದು ಗ್ರಾಮೀಣ ಕ್ರೀಡೆ, ಸಾಹಸ ಕ್ರೀಡೆಗಳು ಸೇರಿದಂತೆ ವಿವಿಧ ಕಾರ್ಯಕ್ರಮ ನಡೆಯಲಿವೆ.

ಕಲಾವಿದರ ಕಲರವ: ಫೆಬ್ರವರಿ 13 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕೃತವಾಗಿ ಉತ್ಸವಕ್ಕೆ ಚಾಲನೆ ನೀಡುವರು. ಮುಖ್ಯ ವೇದಿಕೆಯಾದ ಎಂ.ಪಿ.ಪ್ರಕಾಶ್ ವೇದಿಕೆಯಲ್ಲಿ ಗಣ್ಯರೊಂದಿಗೆ ನಟ ಶಿವರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ರುಕ್ಮಿಣಿ ವಸಂತ್ ವೇದಿಕೆ ಹಂಚಿಕೊಳ್ಳಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ಗಾಯಕ ವಿಜಯ್ ಪ್ರಕಾಶ್ ಮತ್ತು ಹರಿಹರನ್ ತಂಡದಿಂದ, ಶ್ರೀಕೃಷ್ಣ ದೇವರಾಯ (ಎದುರು ಬಸವಣ್ಣ) ವೇದಿಕೆಯಲ್ಲಿ ಶಮಿತಾ ಮಲ್ನಾಡ್ ತಂಡ ಹಾಗೂ ವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಕಲಾವತಿ ದಯಾನಂದ್ ತಂಡದಿಂದ ಸುಮಧುರ ಗೀತಗಾಯನ ನಡೆಸಿಕೊಡಲಿದ್ದಾರೆ.

ಫೆಬ್ರವರಿ 14 ಉತ್ಸವದ 2ನೇ ದಿನದಂದು ಮುಖ್ಯ ವೇದಿಕೆಯಾದ ಎಂ.ಪಿ.ಪ್ರಕಾಶ್ ವೇದಿಕೆಯಲ್ಲಿ ಗೋಲ್ಡನ್ ಸ್ಟಾರ್ ಗಣೇಶ್, ರಾಜ್ ಬಿ ಶೆಟ್ಟಿ, ಸಪ್ತಮಿ ಗೌಡ, ಝೈದ್ ಖಾನ್, ಗಿಲ್ಲಿ ಮತ್ತು ಕಾವ್ಯ ಇವರ ವೇದಿಕೆ ಕಾರ್ಯಕ್ರಮ ನಡೆಯಲಿದೆ. ತದನಂತರ ನವೀನ್ ಸಜ್ಜು ಮತ್ತು ಅರ್ಜುನ್ ಜನ್ಯ ತಂಡದಿಂದ ಗೀತಗಾಯನ ಪ್ರಸ್ತುತಿ. ಶ್ರೀಕೃಷ್ಣ ದೇವರಾಯ (ಎದುರು ಬಸವಣ್ಣ) ವೇದಿಕೆಯಲ್ಲಿ ಎಂಡಿ ಪಲ್ಲವಿ ಮತ್ತು ತಂಡದಿಂದ ವಿರೂಪಾಕ್ಷೇಶ್ವರ ವೇದಿಕೆಯ ಬಳಿ ಹೊಸಪೇಟೆಯ ಸ್ವರಾರ್ಥ ಬ್ಯಾಂಡ್ ವತಿಯಿಂದ ಸುಮಧುರ ಗೀತೆ ಗಾಯನ ಪ್ರಸ್ತುತಪಡಿಸಲಿದ್ದಾರೆ.

ಫೆಬ್ರವರಿ 15 ರಂದು ಮುಖ್ಯ ವೇದಿಕೆಯಲ್ಲಿ ನಟರಾದ ಡಾಲಿ ಧನುಂಜಯ್, ಧ್ರುವಸರ್ಜಾ ಹಾಗೂ ರಚಿತಾರಾವ್ ವೇದಿಕೆ ಹಂಚಿಕೊಳ್ಳಲಿದ್ದಾರೆ. ತದನಂತರದಲ್ಲಿ ರಘು ದೀಕ್ಷಿತ್, ಮಂಗಲಿ ಮತ್ತು ಮಣಿಕಾಂತ್ ಖದ್ರಿ ತಂಡದಿಂದ ಗಾಯನ ಏಪಾಡಿಸಲಾಗಿದೆ. ಶ್ರೀಕೃಷ್ಣ ದೇವರಾಯ (ಎದುರು ಬಸವಣ್ಣ) ವೇದಿಕೆಯಲ್ಲಿ ವಾಸುಕಿ ವೈಭವ್ ಮತ್ತು ತಂಡ ವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಬಿಗ್‌ಬಾಸ್ ವಿಜೇತ ತಂಡ ಹನುಮಂತ ಮತ್ತು ತಂಡದಿಂದ ಗೀತ ಗಾಯನದೊಂದಿಗೆ ಜನ-ಮನ ರಂಜಿಸಲಿದ್ದಾರೆ ಎಂದರು.

ವಿಶೇಷ ಡ್ರೋನ್ ಶೋ:

ಈ ಬಾರಿಯ ವಿಶೇಷವಾಗಿ ಒಂದು ಸಾವಿರಕ್ಕೂ ಅಧಿಕ ಡ್ರೋನ್ ಬಳಸಿ ಹಂಪಿ ಗತವೈಭವ ಸಾರುವ 12 ಚಿತ್ರಗಳು ಆಗಸದಲ್ಲಿ ಮೂಡಿಬರಲಿವೆ. ಇದು ಹಂಪಿ ಉತ್ಸವದ ವಿಶೇಷವಾಗಿದ್ದು, ಪ್ರಮುಖ ವೇದಿಕೆ ಬಳಿ ಮೂರು ದಿನಗಳ ಕಾಲ ಡ್ರೋನ್ ದೀಪಗಳಲ್ಲಿ ಮಿಂದೇಳಲಿವೆ.

ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆ:

ಹಂಪಿ ಉತ್ಸವದ ಮೆರಗು ಕಣ್ತುಂಬಿಕೊಳ್ಳಲು ಜಿಲ್ಲೆಯ ಎಲ್ಲಾ ತಾಲ್ಲೂಕಿಗೆ 3 ದಿನಗಳ ಕಾಲ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ದೂರದ ಊರುಗಳಿಂದ ಬರುವವರಿಗೆ ಹಾಗೂ ಗ್ರಾಮೀಣ ಭಾಗದ ಜನತೆಗೆ ಅನುಕೂಲವಾಗಲಿದೆ. ಆದ್ದರಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಾರಿಗೆ ವ್ಯವಸ್ಥೆಯನ್ನು ಸದ್ಬಳಕೆ ಮಾಡಿಕೊಂಡು ಉತ್ಸವ ಯಶಸ್ವಿಗೊಳಿಸಬೇಕು ಎಂದರು.

ಪಾರ್ಕಿಂಗ್ ವ್ಯವಸ್ಥೆ: ಸಾರ್ವಜನಿಕರಿಗೆ ಅನುಕೂಲವಾಗುವಂತೆ ಈ ಬಾರಿ ವೇದಿಕೆ ಹತ್ತಿರದಲ್ಲೇ ಸುಮಾರು 20 ಎಕರೆ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ವೃದ್ದರಿಗೆ, ಅಂಗವಿಕಲರಿಗೆ ಸಾಕಷ್ಟು ಅನುಕೂಲವಾಗಲಿದೆ. ಅಗತ್ಯವಿದ್ದಲ್ಲಿ ಕಡ್ಡಿರಾಂಪುರ ಬಳಿ ಹೆಚ್ಚಿನ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುವುದು.

ಸಮರ್ಪಕ ಮೂಲಭೂತ ಸೌಲಭ್ಯ:

ಹಂಪಿ ಉತ್ಸವ ಕಣ್ತುಂಬಿಕೊಳ್ಳಲು ಜಿಲ್ಲೆ, ರಾಜ್ಯ, ನೆರೆ ರಾಜ್ಯಗಳಿಂದ ಅಂದಾಜು 10 ಲಕ್ಷಕ್ಕೂ ಅಧಿಕ ಜನ ಸೇರುವ ನಿರೀಕ್ಷೆ ಇದೆ. ಉತ್ಸವಕ್ಕೆ ಆಗಮಿಸುವ ಗಣ್ಯರಿಗೆ, ಕಲಾವಿದರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಊಟ-ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಹಾಗೆಯೇ ಉತ್ಸವದ ಕಳೆ ಮೆರಗನ್ನು ತನುಮನದೊಂದಿಗೆ ಆನಂದಿಸಲು ಆಗಮಿಸುವ ಸಾರ್ವಜನಿಕರಿಗೆ ಸಮರ್ಪಕವಾಗಿ ಕುಡಿಯುವ ನೀರು, ಶೌಚಾಲಯ, ನೆರಳಿನ ವ್ಯವಸ್ಥೆ ಯಾವುದೇ ಕೊರತೆಯಾಗದಂತೆ ಅಗತ್ಯ ಕ್ರಮವಹಿಸಲಾಗಿದೆ.

ಧ್ವನಿ ಮತ್ತು ಬೆಳಕು ಕಾರ್ಯಕ್ರಮ : ಹಂಪಿ ಉತ್ಸವದ ಮತ್ತೊಂದು ಪ್ರಮುಖ ಆಕರ್ಷಣೆ ಧ್ವನಿ ಮತ್ತು ಬೆಳಕು ಕಾರ್ಯಕ್ರಮ. ಇಲ್ಲಿ ಸ್ಥಳೀಯ ಕಲಾವಿದರಿಂದ ವಿಜನಯನಗರ ಸಾಮ್ರಾಜ್ಯದ ಗತವೈಭವ ಸಾರುವ ಸುವರ್ಣ ಯುಗವನ್ನು ಅಭಿನಯದ ಮೂಲಕ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಭಿತ್ತರಿಸುವರು. ಇದು ಉತ್ಸವಕ್ಕೆ ತೆರೆ ಎಳೆದರೂ ಸಹ 7 ದಿನಗಳ ಕಾಲ ಮುಂದುವರೆಯಲಿದೆ ಎಂದ ಅವರು, ಉತ್ಸವ ಯಶಸ್ವಿಗಾಗಿ ಸರ್ಕಾರಕ್ಕೆ ರು.25 ಕೋಟಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಸೂಕ್ತ ಬಂದೋಬಸ್ತ್: ಹಂಪಿ ಉತ್ಸವ ಅಂಗವಾಗಿ ನೆರೆ ಜಿಲ್ಲೆ, ರಾಜ್ಯ, ದೇಶ ವಿದೇಶಗಳಿಂದ ಜನ ಆಗಮಿಸಲಿದ್ದಾರೆ. ಆದ್ದರಿಂದ ಪೊಲೀಸ್ ಇಲಾಖೆ ಬಂದೋ ಬಸ್ತ್ ಗೆ ಬೇಕಾದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಉತ್ಸವದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟನಲ್ಲಿ 8 ಎಸ್ಪಿ, 15 ಡಿವೈಎಸ್ಪಿ, 60 ಇನ್ಸ್ಪೆಕ್ಟರ್, 120 ಸಬ್ ಇನ್ಸ್ಪೆಕ್ಟರ್, ಒಂದು ಸಾವಿರ ಪುರುಷ ಪೊಲೀಸ್ ಸಿಬ್ಬಂದಿ, 800 ಗೃಹರಕ್ಷಕ ಸಿಬ್ಬಂದಿ ನಿಯೋಜಿಸಲಾಗಿದೆ. ಅದಷ್ಟೇ ಅಲ್ಲದೇ ಪ್ರಮುಖ ಸ್ಥಳಗಳಲ್ಲಿ 250ಕ್ಕೂ ಹೆಚ್ಚು ಸಿಸಿಟಿವಿ ಅಳವಡಿಸಲಾಗುತ್ತಿದ್ದು, ಇದರ ನಿರ್ವಹಣೆಗಾಗಿ ತಾತ್ಕಾಲಿಕ ಕಮಾಂಡ್ ಸೆಂಟರ್ ಮತ್ತು 10 ವಾಚಿಂಗ್ ಟವರ್ ಸ್ಥಾಪಿಸಲಾವುದು. ಮಹಿಳಾ ಮತ್ತು ಮಕ್ಕಳ ಸುರಕ್ಷತೆಗಾಗಿ ವಿಶೇಷ ಮಹಿಳಾ ತಂಡ ರಚಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮೊಹ್ಮದ್ ಅಲಿ ಅಕ್ರಂ ಷಾ ಇದ್ದರು.



ಬಾಲಕಾರ್ಮಿಕ ಮುಕ್ತ ಜಿಲ್ಲೆಯಾಗಿಸಲು ಸಮನ್ವಯತೆಯಿಂದ ಕಾರ್ಯನಿರ್ವಹಿಸಿ : ಜಿ.ಪಂ ಸಿಇಓ ಅಕ್ರಂ ಷಾ

ವಿಜಯನಗರ,,ಫೆ.11-

ಬಾಲಕಾರ್ಮಿಕ ಪದ್ದತಿ ನಿರ್ಮೂಲನೆಗಾಗಿ ಹಲವು ಕಾಯ್ದೆ ಕಾನೂನು ಜಾರಿಗೊಳಿಸಲಾಗಿದೆ. ಆದರೂ ಇಂದಿಗೂ ಜಿಲ್ಲೆಯಲ್ಲಿ ಬಾಲಕಾರ್ಮಿಕ ಕುರಿತ ಪ್ರಕರಣ ದಾಖಲಾಗುತ್ತಿವೆ. ಆದ್ದರಿಂದ ಜಿಲ್ಲೆಯನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯಾಗಿಸಲು ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿ ಸಬೇಕು ಎಂದು ಜಿ.ಪಂ ಸಿಇಓ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ತಾಕೀತು ಮಾಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ತಾಲ್ಲೂಕು ಕಾನೂನು ಸೇವಾ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಶಿಕ್ಷಣ ಇಲಾಖೆ ವತಿಯಿಂದ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜೀತ ಪದ್ದತಿ ನಿರ್ಮೂಲನೆ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.ಆಧುನಿಕ ನಾಗರಿಕ ಸಮಾಜದಲ್ಲಿ ಜೀತ ಪದ್ಧತಿಯು ಒಂದು ಶಾಪವಾಗಿ ಪರಿಣಮಿಸಿದೆ. ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಎಲ್ಲಾ ಇಲಾಖೆಗಳ ಅಧಿಕಾರಿಗಳು ಕ್ರಿಯಾಶೀಲವಾಗಿ ಕಾರ್ಯಪ್ರವೃತ್ತರಾಗಬೇಕಿದೆ. ಇದು ಕೇವಲ ಕಾರ್ಮಿಕ ಇಲಾಖೆ ಅಥವಾ ಯಾವುದೋ ಒಂದು ಇಲಾಖೆಯ ಕಾರ್ಯವಲ್ಲ. ಪ್ರತಿಯೊಂದು ಇಲಾಖೆ ಅಧಿಕಾರಿಗಳು ಸೇರಿ ತಂಡವಾಗಿ ಕಾರ್ಯನಿರ್ವಹಿಸ ೀಬೇಕು. ಜಿಲ್ಲೆಯ ಯಾವುದೇ ಸ್ಥಳದಲ್ಲಿ ಇಂತಹ ಪ್ರಕರಣ ಕಂಡು ಬಂದಲ್ಲಿ ಗಂಭೀರವಾಗಿ ಪರಿಗಣಿಸಿ, ಬಾಲ ಕಾರ್ಮಿಕ ಪದ್ದತಿ ನಿರ್ಮೂಲನೆಗೆ ಕಟಿಬದ್ದರಾಗಿ ಜಾಗೃತವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ತಿಳಿಸಿದರು. ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡೊಂಬ ರ್ ಮತ್ತೂರ್, ಕ್ಷೇತ್ರ ಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ ಮಾತನಾಡಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಮಂಜು ನಾಥ್, ಮಕ್ಕಳ ರಕ್ಷಣಾಧಿಕಾರಿ ಸುದೀಪ್ ಕುಮಾರ್ ಉಂಕಿ, ಜಿ.ಪಂ. ಸಹಾಯಕ ಕಾರ್ಯದರ್ಶಿ ಮೌನೇಶ್ ಮತ್ತಿತರರು ಇದ್ದರು.



ಚಿತ್ರಕಲಾ ಶಿಬಿರಕ್ಕೆ ಡಿಸಿ ಚಾಲನೆ

ವಿಜಯನಗರ , ಫೆ.11-

ಜಿಲ್ಲೆಯ ಹೊಸಪೇಟೆ ಹಂಪಿ ಉತ್ಸವದ ಅಂಗವಾಗಿ ಹಂಪಿ ಗ್ರಾಮ ಪಂಚಾಯತಿಯಲ್ಲಿ ಆಯೋಜಿಸಲಾಗಿದ್ದ ಚಿತ್ರಕಲಾ ಶಿಬಿರಕ್ಕೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅವರು ಚಿತ್ರ ರಚಿಸುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಉಪವಿಭಾಗಾಧಿಕಾರಿ ವಿವೇಕಾನಂದ, ಅರಣ್ಯ ಇಲಾಖೆ ಉಪ ಸಂರಕ್ಷಣಾಧಿಕಾರಿ ಅನುಪಮ ಸೇರಿದಂತೆ ಮತ್ತಿತರರು ಇದ್ದರು.

ಎಎಪಿ ವೆಬ್‌ಸೈಟ್‌ನಲ್ಲಿ ಮಹಿಳಾ ಉದ್ಯಮಿಗಳ ನೋಂದಣಿ

ಬಾಗಲಕೋಟೆ,ಫೆ.10-

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಡಿಯಲ್ಲಿ ಗೃಹಲಕ್ಷ್ಮೀ ಡಿಜಿಟಲ್ ಮಾರ್ಕೆಟಿಂಗ್ (AAP) (https://gruhalakshmidigital.org) ವೆಬ್‌ಸೈಟ್ ಬಿಡುಗಡೆ ಮಾಡಲಾಗಿದ್ದು, ಈ ವೆಬ್‌ಸೈಟ್‌ನಲ್ಲಿ ಮಹಿಳಾ ಉದ್ಯಮಿಗಳು ನೋಂದಣಿ ಮಾಡಿಕೊಳ್ಳಬಹುದಾಗಿದೆ.

ವಿವಿಧ ವಸ್ತುಗಳ ಉತ್ಪಾದಿಸುವ ಘಟಕಗಳ ಮಹಿಳಾ ಉದ್ಯಮಿಗಳು, ಸ್ವಯಂ ಉದ್ಯೋಗ ನಡೆಸುತ್ತಿರುವ ಮಹಿಳೆಯರು, ಉದ್ಯಮಿಗಳ ವಿವರ ಮತ್ತು ಮಹಿಳಾ ಉದ್ದಿಮೆದಾರರು ಉತ್ಪಾದಿಸುವ ವಸ್ತುಗಳ ಫೋಟೋಗಳನ್ನು ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಸಲ್ಲಿಸಬಹುದಾಗಿದೆ. ಆದ್ದರಿಂದ ಮಹಿಳಾ ಉದ್ದಿಮೆದಾರರು ಈ ವೆಬ್‌ಸೈಟ್‌ನಲ್ಲಿ ಮಹಿಳಾ ಉದ್ದಿಮೆದಾರರ ಹೆಸರು, ಉತ್ಪಾದನೆ ವ್ಯಾಪಾರ ಮಾಡುತ್ತಿರುವ ವಸ್ತುನಿನ ಹೆಸರು, ವಿಳಾಸ, ಇ-ಮೇಲ್ ಐಡಿ, ದೂಸಂ., ಉತ್ಪಾದನೆ, ವ್ಯಾಪಾರ ಮಡುತ್ತಿರುವ ವಸ್ತುವಿನ ಸುಂದರವಾದ ಫೋಟೋಗಳ ದಾಖಲೆಗಳನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ (08354-297464) ಹಾಗೂ ಜಿಲ್ಲಾ ಅಭಿವೃದ್ಧಿ ನಿರೀಕ್ಷಕರು, ಕರ್ನಾಟಕ ರಾಜ್ಯ ಮಹಿಳಾ ಅಬಿವೃದ್ಧಿ ನಿಗಮ ಕಚೇರಿ ಬಾಗಲಕೋಟೆ ಅವರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಅಂತರಾಷ್ಟ್ರೀಯ ಅಪಸ್ಮಾರ ಜಾಥಾ ಕಾರ್ಯಕ್ರಮಕ್ಕೆ ಚಾಲನೆ

ಯಾದಗಿರಿ,ಫೆ.11-

ಅಪಸ್ಮಾರ (Epilepsy) ಎಂಬುದು ಮೆದುಳಿನ ದೀರ್ಘಕಾಲದ ನರವೈಜ್ಞಾನಿಕ ಕಾಯಿಲೆಯಾಗಿದ್ದು, ಅಸಹಜ ವಿದ್ಯುತ್ ಚಟುವಟಿಕೆಯಿಂದಾಗಿ ಪದೇ ಪದೇ ಪ್ರಜ್ಞೆ ತಪ್ಪುವಿಕೆ ಅಥವಾ ದೇಹದ ಸೆಳೆತ (ಖಜಡದಣಡಿಜ) ಉಂಟಾಗುತ್ತದೆ, ಇದು ಎಲ್ಲಾ ವಯಸ್ಸಿನವರಲ್ಲಿ ಕಂಡುಬರುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ಮಹೇಶ ಬಿರಾದಾರ್ ಅವರು ಹೇಳಿದರು.

ಯಾದಗಿರಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ ಫೆ.9ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಅಂತರಾಷ್ಟ್ರೀಯ ಅಪಸ್ಮಾರ ದಿನಾಚರಣೆ ನಿಮಿತ್ಯ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಪಸ್ಮಾರ ಪ್ರತಿಜ್ಞೆ, ಕಥೆಗಳನ್ನು ಕ್ರಿಯೆಯಾಗಿ ಪರಿವರ್ತಿಸುವುದು ಎಂಬ ಘೋಷವಾಕ್ಯದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಲಯ, ಯಾದಗಿರಿಯಿಂದ ಅಂತರಾಷ್ಟ್ರೀಯ ಅಪಸ್ಮಾರ ಜಾಗೃತಿ



ಅಭಿಯಾನದ ಕುರಿತು ಜಾಥಾ ಕಾರ್ಯಕ್ರಮ ಕೈಗೊಳ್ಳಲಾಯಿತು.

ಅಪಸ್ಮಾರ ಎಂಬುದು ಮೆದುಳಿನ ದೀರ್ಘಕಾಲದ ನರವೈಜ್ಞಾನಿಕ ಕಾಯಿಲೆಯಾಗಿದ್ದು, ಅಸಹಜ ವಿದ್ಯುತ್ ಚಟುವಟಿಕೆಯಿಂದಾಗಿ ಪದೇ ಪದೇ ಪ್ರಜ್ಞೆ ತಪ್ಪುವಿಕೆ ಅಥವಾ ದೇಹದ ಸೆಳೆತ ಉಂಟಾಗುತ್ತದೆ. ಇದು ಎಲ್ಲಾ ವಯಸ್ಸಿನವರಲ್ಲಿ ಕಂಡುಬರುತ್ತದೆ, ತಲೆಗೆ ಪೆಟ್ಟು, ಮೆದುಳಿನ ಸೋಂಕು ಅಥವಾ ಅನುವಂಶೀಯ ಕಾರಣಗಳಿಂದ ಬರಬಹುದು. ಔಷಧಿ ಮತ್ತು ಜೀವನಶೈಲಿ ಬದಲಾವಣೆಯಿಂದ ಇದನ್ನು ನಿಯಂತ್ರಿಸಬಹುದು ಎಂದು ತಿಳಿಸಿದರು.

ಜಿಲ್ಲಾ ಎನ್.ಸಿ.ಡಿ ಕಾರ್ಯಕ್ರಮ ಅಧಿಕಾರಿಗಳಾದ ಡಾ.ಪದ್ಮಾನಂದ ಗಾಯಕ್ವಾಡ ಅವರು ಮಾತನಾಡಿ, ಅಪಸ್ಮಾರದ ರೋಗನಿರ್ಣಯವು ನಿಮ್ಮ ರೋಗಗ್ರಸ್ತವಾಗುವಿ ಕೆಗಳ ಇತಿಹಾಸವನ್ನು ಆಧರಿಸಿದೆ, ನಿಮ್ಮ ವೈದ್ಯರು ನಿಮಗೆ ಏನು ನೆನಪಿದೆ ಮತ್ತು ರೋಗಗ್ರಸ್ತವಾಗುವಿಕೆಗಳು ಸಂಭವಿಸುವ ಮೊದಲು ನೀವು ಹೊಂದಿದ್ದ ಯಾವುದೇ ಲಕ್ಷಣಗಳು, ವಿಚಿತ್ರ ಭಾವನೆ ಅಥವಾ ಯಾವುದೇ ಇತರ ಎಚ್ಚರಿಕೆ ಚಿಹ್ನೆಗಳ ಬಗ್ಗೆ ಕೇಳುತ್ತಾರೆ ಎಂದು ಹೇಳಿದರು.

ಮಿದುಳಿನ ಗಾಯ, ತಲೆಗೆ ಗಾಯ ಅಥವಾ ಗಾಯಗಳು.ಮಿದುಳಿನ ಸ್ಥಿತಿಗಳು, ಗೆಡ್ಡೆಗಳು, ಪಾರ್ಶ್ವವಾಯು ಅಥವಾ ಸೋಂಕಗಳು (ಮೆನಿಂಜೈಟಿಸ್). ಬೆಳವಣಿಗೆಯ ಅಂಶಗಳು, ಬೆಳವಣಿಗೆಯ ಅಸ್ವಸ್ಥತೆಗಳು ಅಥವಾ ಮೆದುಳಿನ ವಿರೂಪಗಳು. ಆನುವಂಶಿಕ ಅಂಶಗಳು, ಯಾವಾಗಲೂ ಅಲ್ಲದಿದ್ದರೂ ಆನುವಂಶಿಕವಾಗಿರುತ್ತದೆ. ಇತರ ಅಂಶಗಳು, ಅತಿಯಾದ ಒತ್ತಡ, ನಿದ್ರೆಯ ಕೊರತೆ ಮತ್ತು ಅಪರೂಪದ ಸಂದರ್ಭಗಳಲ್ಲಿ, ನಿರ್ದಿಷ್ಟ ಸಂವೇದನಾ ಪ್ರಚೋದಕಗಳು ತಿಳಿಸಿದರು.

ಈ ಸಂದರ್ಭದಲ್ಲಿ ಡಿಎವ್‌ಓ ಅಧಿಕಾರಿಗಳಾದ ಡಾ.ಮುಬಾಶೀರ್ ಅಹ್ಮದ್, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ.ಎಂ.ಎಸ್.ಪಾಟೀಲ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಜ್ಯೋತಿ ಕಟ್ಟಿಮನಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ಮಲ್ಲಪ್ಪ, ತಾಲೂಕು ಆರೋಗ್ಯಾಧಿಕಾರಿಗಳಾದ ಡಾ.ಹಣಮಂತರೆಡ್ಡಿ, ಡಾ.ವರ್ಧಮಾನ ಮೆಡಿಕಲ್ ಆಫಿಸರ್, ಡಾ.ವಿನುತಾ, ಡಾ.ಮೋಹನ್ ರೆಡ್ಡಿ, ಸ್ಟಾಫ್‌ನರ್ಸ್ ಸಿದ್ದಾರೂಡ, ಡಾ. ರಶೀದ್, ತುಳಸಿರಾಮ್, ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗಳು ನಮ್ಮ ಕ್ಲಿನಿಕ್ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ನಾಗರತ್ನ ವಂದನಾರ್ಪಣೆ ನೆರವೇರಿಸಿದರು.

ಯುವ ಪಿಳಿಗೆ ತಂಬಾಕು ಪದಾರ್ಥಗಳಿಂದ ದೂರವಿರಲು ಡಿಹೆಚ್‌ಓ ಡಾ.ಮಹೇಶ ಬಿರಾದಾರ್ ಕರೆ

ಯಾದಗಿರಿ, ಫೆ.11-

ದಿನಗಳಲ್ಲಿ ಅಸಾಂಕ್ರಾಮಿಕ ರೋಗಗಳು ದಿನೆ ದಿನೆ ಹೆಚ್ಚುತ್ತಿರುವುದರಿಂದ ಅಸಾಂಕ್ರಾಮಿಕವಾದ ಕ್ಯಾನ್ಸರ್ ನಮ್ಮ ಜೀವಶೈಲಿ ಆಹಾರ ಪದ್ದತಿ ವ್ಯಾಯಮವಿಲ್ಲದ ಜೀವನ ತಂಬಾಕು ಪದಾರ್ಥಗಳ ಸೇವನೆಯಿಂದ ಬಹಳಷ್ಟು ಜನರಿಗೆ ಈ ರೋಗವು ಕಂಡುಬರುತ್ತಿದೆ. ಯುವ ಪಿಳಿಗೆ ತಂಬಾಕು ಪದಾರ್ಥಗಳಿಂದ ದೂರವಿರಲು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಮಹೇಶ ಬಿರಾದಾರ್ ಅವರು ಕರೆ ನೀಡಿದರು.

ಯಾದಗಿರಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಭಾಂಗಣದಲ್ಲಿ ಇತ್ತೀಚಿನ ನಡೆದ ಫೆ.7 ರಂದು ವಿಶ್ವಕ್ಯಾನ್ಸರ್ ದಿನಾಚರಣೆಯನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಎನ್.ಸಿ.ಡಿ. ವಿಭಾಗ ಮತ್ತು ಇಂಡಿಯನ್ ಕ್ಯಾನ್ಸರ್ ಸೋಸೈಟಿ ಕರ್ನಾಟಕ, ಕಲಬುರಗಿ ಪ್ರಾದೇಶಿಕ ಹಾಗೂ ಅರವಿಂದ ಫ್ಯಾಶನ್ಸ್ ಸಂಯುಕ್ತಾಶ್ರಯದಲ್ಲಿ ವಿಶ್ವಕ್ಯಾನ್ಸರ್ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಅಸಾಂಕ್ರಾಮಿಕ ರೋಗಗಳು ದಿನೆ ದಿನೆ ಹೆಚ್ಚುತ್ತಿರುವುದರಿಂದ ಅಸಾಂಕ್ರಾಮಿಕವಾದ ಕ್ಯಾನ್ಸರ್ ನಮ್ಮ ಜೀವಶೈಲಿ ಆಹಾರ ಪದ್ದತಿ ವ್ಯಾಯಮವಿಲ್ಲದ ಜೀವನ ತಂಬಾಕು ಪದಾರ್ಥಗಳ ಸೇವನೆಯಿಂದ ಬಹಳಷ್ಟು ಜನರಿಗೆ ಈ ರೋಗವು ಕಂಡುಬರುತ್ತಿದೆ. ಯುವ



ಪಿಳಿಗೆ ತಂಬಾಕು ಪದಾರ್ಥಗಳಿಂದ ದೂರವಿರಲು ಕರೆಗೊಟ್ಟರು. ಮಹಿಳೆಯರಲ್ಲಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ಹೆಚ್ಚಾಗುತ್ತಿರುವುದರಿಂದ ನಿಯಮಿತವಾಗಿ ತಪಾಸಣೆಯನ್ನು ಮಾಡಿಸಿಕೊಳ್ಳಬೇಕು. ಮತ್ತು ಊಕಗಿ ವ್ಯಾಕ್ಸಿನ್ ಎಲ್ಲಾ ಅರ್ಹ ಹೆಣ್ಣು ಮಕ್ಕಳು ಪಡೆಯಬೇಕು ಎಂದು ಹೇಳಿದರು.

ಜಿಲ್ಲಾ ಎನ್.ಸಿ.ಡಿ ಕಾರ್ಯಕ್ರಮ ಅಧಿಕಾರಿಗಳಾದ ಡಾ.ಪದ್ಮಾನಂದ ಗಾಯಕ್ವಾಡ ಅವರು ಮಾತನಾಡಿ, ಕ್ಯಾನ್ಸರ್ ಎಂದರೆ ದೇಹದ ಒಂದು ಭಾಗದ ಅಸಹಜ ಜೀವಕೋಶಗಳ ಅನಿಯಂತ್ರಿತ ಬೆಳವಣಿಗೆಯಿಂದ ಉಂಟಾಗುವ ಒಂದು ರೋಗವಾಗಿದ್ದು, ಅದನ್ನು ಬೇಗನೆ ಪತ್ತೆ ಹಚ್ಚುವುದರಿಂದ ಕಂಡಿತವಾಗಿಯು ಗುಣಮುಖರಾಗುತ್ತಾರೆಂದು ತಿಳಿಸಿದರು.

ಜಿಲ್ಲಾ ಕಾರ್ಯಕ್ರಮ ಅಭಿವೃದ್ಧಿ ಅಧಿಕಾರಿಗಳಾದ ಡಾ.ಮುಬಾಶೀರ್ ಅಹ್ಮದ್ ಅವರು ಮಾತನಾಡಿ, ಜಿಲ್ಲೆಯಲ್ಲಿ 30 ವರ್ಷದ ಮೇಲ್ಪಟ್ಟ ಎಲ್ಲಾ ಮಹಿಳೆಯರು ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳಲು ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸೌಲಭ್ಯ ಇರುವ ಕುರಿತು ಕಾರ್ಯಕ್ರಮದಲ್ಲಿ ತಿಳಿಸಿದರು, ತಂಬಾಕು ಹಾಗೂ ಸರಾಯಿ ಸೇವನೆ, ಅಪೌಷ್ಠಿಕಾಂಶಯುಕ್ತ ಆಹಾರ ಸೇವನೆಗಳಿಂದ ಕ್ಯಾನ್ಸರ್ ಬರಲು ಸಾಧ್ಯತೆ ಹೆಚ್ಚಿರುತ್ತದೆ ಎಂದರು.

ಇಂಡಿಯನ್ ಕ್ಯಾನ್ಸರ್ ಸೊಸೈಟಿ ಕಲಬುರಗಿಯ ಡಾ.ಗುರುರಾಜ ಕುಲಕರ್ಣಿ ಅವರು ಮಾತನಾಡಿ, 2025-26 ವರ್ಷದಲ್ಲಿ ಯಾದಗಿರಿ ಜಿಲ್ಲೆಯ ಯಾದಗಿರಿ ಶಹಾಪೂರ ತಾಲೂಕಿಲ್ಲಿ ಒಟ್ಟು 48 ಉಚಿತ ಕ್ಯಾನ್ಸರ್ ತಪಾನಣಾ ಶಿಬಿರಗಳನ್ನು ಹಮ್ಮಿಕೊಂಡಿದ್ದು, ಸುಮಾರು 4,023 ಜನರಿಗೆ ಕ್ಯಾನ್ಸರ್ ತಪಾಸಣೆ ಮಾಡಲಾಗಿದ್ದು ಅದರಲ್ಲಿ 2,747 ಮಹಿಳೆಯರಿಗೆ ಬಾಯಿ, ಸ್ಥನ ಮತ್ತು ಗರ್ಭಕಂಠ ಕ್ಯಾನ್ಸರ್ ಹಾಗೂ 1,276 ಪುರುಷರಿಗೆ ಬಾಯಿ ಕ್ಯಾನ್ಸರ್ ತಪಾಸಣೆ ಮಾಡಲಾಗಿದೆ. ಇವರಲ್ಲಿ ಅನುಮಾನಸ್ಪದ ಕಂಡುಬಂದವರಿಗೆ ಹೆಚ್ಚಿನ ಪರೀಕ್ಷೆಗಾಗಿ ಕಲಬುರಗಿಯ ಕಿದ್ವಾಯಿ ಕ್ಯಾನ್ಸರ್ ಆಸ್ಪತೆಯ ವೈದ್ಯರೊಂದಿಗೆ ಸಮನ್ವಯದೊಂದಿಗೆ ಕಳುಹಿಸಲಾಗಿದೆ. ಸುಮಾರ 400ಕ್ಕೂ ಅಧಿಕ ಶಾಲಾ ವಿದ್ಯಾರ್ಥಿಗಳಿಗೆ ತಂಬಾಕು ವಿರೋಧಿ ಜಾಗೃತಿ ಕಾರ್ಯಕ್ರಮವನ್ನು ಮಾಡಲಾಗಿದೆ ಎಂದು ಹೇಳಿದರು.

''ವಿಶಿಷ್ಟತೆಯಿಂದ ಏಕತೆ'' ಎಂಬ ಘೋಷವಾಕ್ಯದೊಂದಿಗೆ ಯಾದಗಿರಿ ಹೊಸ ಬಸ್ ನಿಲ್ದಾಣದಿಂದ ಕ್ಯಾನ್ಸರ್ ಜಾಗೃತಿ ಅಭಿಯಾನದ ಕುರಿತು ಜಾಥಾ ಕಾರ್ಯಕ್ರಮ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ.ಎಂ.ಎಸ್.ಪಾಟೀಲ್, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ರಿಜ್ವಾನ ಆಫ್ರೀನ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಜ್ಯೋತಿ ಕಟ್ಟಿಮನಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ಮಲ್ಲಪ್ಪ, ತಾಲೂಕು ಆರೋಗ್ಯಾಧಿಕಾರಿಗಳಾದ ಡಾ.ಹಣಮಂತರೆಡ್ಡಿ, ಡಾ.ಅಶೋಕ ರೆಡ್ಡಿ, ಆಕ್ಸಫರ್ಡ ನರ್ಸಿಂಗ್ ಕಾಲೇಜು, ಶ್ರೀಹರಿ ಪ್ಯಾರಮೇಡಿಕಲ್ ಕಾಲೇಜು, ಹುಲಿಗೆಪ್ಪ ಪ್ಯಾರಮೇಡಿಕಲ್ ಕಾಲೇಜು ಯಾದಗಿರಿ ಪ್ರಾಂಶುಪಾಲರು, ಶಿಕ್ಷಕರು, ವಿದ್ಯಾರ್ಥಿಗಳು, ಇಂಡಿಯನ್ ಕ್ಯಾನ್ಸರ್ ಸೋಸೈಟಿಯ ಶ್ರೀನಿಧಿನಾಯ್ಕಲ್, ಡಾ.ಸುಶ್ಮಿತಾ, ಡಾ.ಕ್ಷಿತಿಜ, ತುಳಸಿರಾಮ್, ಶಾಂತಿಲಾಲ್, ಮಾಳಪ್ಪ ಯಾದವ, ಸಹನಾದೇಶಪಾಂಡೆ, ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಗಳು ನಮ್ಮ ಕ್ಲಿನಿಕ್ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಲಕ್ಷ್ಮಿಮುಂಡಾಸ್ ನಿರೂಪಿಸಿದರು. ಎನ್.ಸಿಡ ಕೋಶದ ಡಾ.ರಶೀದ್ ವಂದನಾರ್ಪಣೆ ನೆರವೇರಿಸಿದರು.



ನಗರಸಭೆ ಅಧ್ಯಕ್ಷ, ಸದಸ್ಯರೊಂದಿಗೆ ಹಂಪಿ ಉತ್ಸವ ಪೂರ್ವಭಾವಿ ಸಭೆ ಹಂಪಿ ಉತ್ಸವ ಯಶಸ್ಸಿಗೆ ಸಹಕರಿಸಿ : ಡಿಸಿ ಕವಿತಾ

ವಿಜಯನಗರ , ಫೆ.11-

ಫೆಬ್ರವರಿ 13 ರಿಂದ 15ರವರೆಗೆ ಹಂಪಿ ಉತ್ಸವ ಕಾರ್ಯಕ್ರಮ ಆಯೋಜಿಸಲಾಗಿದ್ದು, ಉತ್ಸವದ ಯಶಸ್ವಿಗೆ ತಮ್ಮೆಲ್ಲರ ಸಹಕಾರ ಅತ್ಯಗತ್ಯ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಗರಸಭೆ ಅಧ್ಯಕ್ಷರು, ಸದಸ್ಯರೊಂದಿಗೆ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಂಪಿ ಉತ್ಸವದ ಅಂಗವಾಗಿ ಫೆಬ್ರವರಿ 7 ರಿಂದ ಹತ್ತು ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ವೇಳೆ ಅಧ್ಯಕ್ಷರು, ಚುನಾಯಿತ ಸದಸ್ಯರು ಭಾಗವಹಿಸಿ ಉತ್ಸವಕ್ಕೆ ಮೆರಗು ತುಂಬುವ ಮೂಲಕ ಯಶಸ್ವಿಗೊಳಿಸಬೇಕು. ಫೆಬ್ರವರಿ 13 ರಂದು ಮುಖ್ಯಮಂತ್ರಿಗಳು ಉತ್ಸವಕ್ಕೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರದ ನಿಯಮಗಳನುಸಾರ ಶಿಷ್ಟಾಚಾರ ಪಾಲನೆ ಮಾಡಬೇಕು ಎಂದು ಮನವಿ ಮಾಡಿದ ಅವರು, ಇದಕ್ಕೆ ತಮ್ಮೆಲ್ಲರ ಸಹಕಾರ ಬೆಂಬಲ ಬೇಕು ಎಂದರು. ಈ ವೇಳೆ ಪ್ರತಿಕ್ರಿಯಿಸಿದ ಸದಸ್ಯರೊಬ್ಬರು ಹಂಪಿ ಉತ್ಸವ ಕೇವಲ ಜಿಲ್ಲಾಡಳಿತ ವತಿಯಿಂದ ಆಯೋಜನೆ ಮಾಡುವ ಉತ್ಸವವಲ್ಲ. ನಮ್ಮೆಲ್ಲರ ಉತ್ಸವ ಇದಕ್ಕೆ ನಮ್ಮೆಲ್ಲರ ಸಹಕಾರವಿದೆ. ಎಲ್ಲರೂ ಸೇರಿ ಉತ್ಸವ ಯಶಸ್ವಿಗೊಳಿಸೋಣ ಎಂದರು.

ಇದೇ ವೇಳೆ ಮತ್ತೊಬ್ಬ ಸದಸ್ಯರು ಮಾತನಾಡಿ, ಉತ್ಸವ ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಪಾಲ್ಗೊಳ್ಳುವಿಕೆಯೂ ಅಷ್ಟೇ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ ಜಿಲ್ಲೆ ಸೇರಿದಂತೆ ಎಲ್ಲಾ ತಾಲ್ಲೂಕುಗಳಿಗೂ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು. ಹಂಪಿ ಉತ್ಸವದ ಕಡೆಯ ದಿನದಂದೇ ಶಿವರಾತ್ರಿ ಹಬ್ಬವಿದ್ದು ಆಗಮಿಸುವ ಭಕ್ತರಿಗೆ, ಸಾರ್ವಜನಿಕರಿಗೆ ಸೂಕ್ತ ಅಗತ್ಯ ಮೂಲಭೂತ ಸೌಕರ್ಯ ಹಾಗೂ ಉತ್ಸವದ ಕಡೆಯ ದಿನದಂದು ಶಿವರಾತ್ರಿ ಹಬ್ಬ ಇರುವುದರಿಂದ ಅಂದು ಜಿಲ್ಲಾದ್ಯಂತ ಮದ್ಯ ಮತ್ತು ಮಾಂಸ ಮಾರಾಟ ಸಂಪೂರ್ಣ ನಿಷೇಧಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಸಿ ಅವರು ಉತ್ಸವಕ್ಕೆ ಆಗಮಿಸುವ ಸಾರ್ವಜನಿಕರಿಗೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ 3 ದಿನಗಳ ಕಾಲ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಅದರಂತೆ ಅಗತ್ಯ ಮೂಲಭೂತ ಸೌಕರ್ಯ ನೀಡಲು ಸಹ ಜಿಲ್ಲಾಡಳಿತ ಸಕಲ ಸಿದ್ದತೆ ಕೈಗೊಂಡಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ಉಪಾಧ್ಯಕ್ಷ ಜಿ.ಎಸ್.ರಮೇಶ್ ಗುಪ್ತಾ ಸೇರಿದಂತೆ ಎಲ್ಲಾ ಚುನಾಯಿತ ಸದಸ್ಯರು ಉಪಸ್ಥಿತಿದ್ದರು.

ಒಂದನೇಯ ಪುಟದಿಂದ

ಶಿವರಾತ್ರಿ ಹಬ್ಬದ ಬಳಿಕ ಬಜೆಟ್ ದಿನಾಂಕದ ಕುರಿತು ನಿರ್ಧಾರ

ಕರೆಯದಿದ್ರೆ ನಾನು ಯಾಕೆ ಹೋಗಲಿ. ಬಜೆಟ್ ಸಭೆ ಇವೆ. ಹೈಕಮಾಂಡ್ ಕರೆದರೆ ಹೋಗುತ್ತೇನೆ ಎಂದು ತಿಳಿಸಿದರು.

ಬಜೆಟ್ ಪೂರ್ವ ಸಿದ್ಧತೆಗೆ ಡಿ.ಕೆ. ಶಿವಕುಮಾರ್ ಗೈರು, ಅನುಮತಿ ಪಡೆದಿದ್ದಾರಾ ಎಂಬ ಪ್ರಶ್ನೆಗೆ, ಹೌದು ಲೆಟರ್ ಬರೆದಿದ್ದಾರೆ. ಅಸ್ಸಾಂ ಚುನಾವಣೆ ಹಿನ್ನೆಲೆಯಲ್ಲಿ ದೆಹಲಿಗೆ ಹೋಗುತ್ತೇನೆ ಅಂತ ಬರೆದಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಸಭೆ ನಡೆಯುತ್ತದೆ ಎಂದಿದ್ದರು.

ಪ್ರತಾಪ್ ಸಿಂಹರಿಗೆ ಬಿಜೆಪಿಯೇ ಟಿಕೆಟ್ ನೀಡಲಿಲ್ಲ- ಸಿಎಂ: ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆ ಮಾಜಿ ಸಂಸದ ಪ್ರತಾಪ್ ಸಿಂಹ ಟೀಕೆ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ಬಿಜೆಪಿ ಪಕ್ಷದವರೇ ತಮ್ಮ ಪಕ್ಷದ ಪ್ರತಾಪ್ ಸಿಂಹರಿಗೆ ಟಿಕೆಟ್ ನೀಡಲಿಲ್ಲ ಎಂದು ತಿರುಗೇಟು ನೀಡಿದರು.

ಕಂದಾಯ ಇಲಾಖೆಯ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸಿ: ಜಹೀರಾ ನಸೀಮ್ ಸೂಚನೆ

ಸಾರ್ವಜನಿಕರ ಆಕಾರ ಬಂದಿ, ಮ್ಯೂಟೇಷನ್, ಪಹಣಿ ಸೇರಿದಂತೆ ಎಲ್ಲವನ್ನೂ ಪಡೆಯಬಹುದಾಗಿದೆ. ಆದ್ದರಿಂದ ಜನರ ದಾಖಲೆಗಳ ಸಂರಕ್ಷಣೆಗೆ ಅಧಿಕಾರಿಗಳು ಹೆಚ್ಚಿನ ಒತ್ತು ಕೊಡಬೇಕು ಎಂದು ತಿಳಿಸಿದರು.

ರೆಕಾರ್ಡ್ ರೂಮ್‌ಗಳ ನಿರ್ವಹಣೆ ಸರಿಯಾಗಿ ಇರಬೇಕು. ಅನುಪಯುಕ್ತ ಮತ್ತು ಅನಗತ್ಯ ವಸ್ತುಗಳನ್ನು ಬೇಗನೇ ವಿಲೇ ಮಾಡಬೇಕು. ದಾಖಲೆಗಳನ್ನು ಸರಿಯಾದ ರೀತಿಯಲ್ಲಿ ಹಾಗೂ ಸೂಕ್ಷ್ಮವಾಗಿ ನಿರ್ವಹಣೆ ಮಾಡುವ ಜವಾಬ್ದಾರಿ ಪ್ರತಿಯೊಬ್ಬ ಅಧಿಕಾರಿ ಮೇಲಿದೆ. ಯಾವ ಯಾವ ದಾಖಲೆಗಳಿಗೆ ಯಾವ ಯಾವ ಬಣ್ಣ ಬಳಸಬೇಕೆಂದು ಸರ್ಕಾರದಿಂದ ಇರುವ ಮಾರ್ಗಸೂಚಿ ಪಾಲನೆಯಾಗಬೇಕು ಎಂದು ಸೂಚನೆ ನೀಡಿದರು.

ಈ ವೇಳೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು, ರಾಯಚೂರು ಜಿಲ್ಲೆಯ ಕಂದಾಯ ಇಲಾಖೆಯ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಅರೇ ನ್ಯಾಯಿಕ ಪ್ರಕರಣಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಬಸವಣೆಪ್ಪ ಕಲಶೆಟ್ಟಿ, ಜಿಲ್ಲಾಧಿಕಾರಿ ಕಚೇರಿಯ ತಹಶೀಲ್ದಾರ್ ಜಗದೀಶ್, ಜಿಲ್ಲೆಯ ವಿವಿಧ ತಾಲೂಕು ತಹಶೀಲ್ದಾರರು, ಶಿರಸ್ತೇದಾರರು, ಉಪ ತಹಶೀಲ್ದಾರರು ಸೇರಿದಂತೆ ಹಾಗೂ ಕಂದಾಯ ಮತ್ತು ಭೂಮಾಪನಾ ಇಲಾಖೆಯ ಅಧಿಕಾರಿಗಳು ಇದ್ದರು.

ಕಾನೂನು ಅರಿವು ನೆರವು ಕಾರ್ಯಕ್ರಮ ಜೀತ ಪದ್ಧತಿ ನಿರ್ಮೂಲನೆಗೆ ಕೈಜೋಡಿಸಿ: ನ್ಯಾ.ಹೆಚ್.ಎ.ಸಾತ್ವಿಕ್ ಸಲಹೆ

ಪಡೆದುಕೊಳ್ಳಬಹುದು ಎಂದರು.

ಕಾರ್ಮಿಕ ಇಲಾಖೆಯ ಜಿಲ್ಲಾ ಅಧಿಕಾರಿ ಆರತಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಯಾರಾದರೂ ಎಲ್ಲಿಯಾದರೂ ಉದ್ಯೋಗ ಅವಕಾಶ ಪಡೆಯಲು ನಮಗೆ ಸಂವಿಧಾನಬದ್ಧ ಹಕ್ಕು ಇರುತ್ತದೆ. ಕೆಲಸ ಅರಸಿ ಬರುವ ಪ್ರತಿಯೊಬ್ಬರಿಗೂ ಉತ್ತಮ ಜೀವನ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಓಡಿಸ್ಸಾ , ಬಿಹಾರ, ಆಂಧ್ರ, ಮಹಾರಾಷ್ಟ್ರ ಮತ್ತು ಇತರೆ ಹೊರ ರಾಜ್ಯಗಳಿಂದ ವಲಸೆ ಕಾರ್ಮಿಕರು ವಲಸೆ ಬಂದು ಇಟ್ಟಿಗೆ ಭಟ್ಟಿಗಳಲ್ಲಿ, ಬೀದಿ ಬದಿಯಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳಲ್ಲಿ ಹತ್ತಿ ಮಿಲ್, ರೈಸ್ ಮಿಲ್ ಕೆಲಸದಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತಿದೆ. ಈ ಜನತೆಗೆ ಕಾನೂನಾತ್ಮಕ ಹಕ್ಕುಗಳು ಹಾಗೂ ಸೌಲಭ್ಯಗಳನ್ನು ಪಡೆಯುವಂತೆ ಸಲಹೆ ನೀಡಿ, ಮಾಲೀಕರಿಗೆ ಕಾರ್ಮಿಕರನ್ನು ಜೀತಪದ್ಧತಿಯಲ್ಲಿ ತೊಡಗಿಸಿಕೊಳ್ಳದಂತೆ ಹಾಗೂ ಮಕ್ಕಳನ್ನು ಬಾಲ ಹಾಗೂ ಕಿಶೋರ ಕಾರ್ಮಿಕರನ್ನಾಗಿಸದೇ ಹತ್ತಿರದ ಅಂಗನವಾಡಿ ಮತ್ತು ಶಾಲೆಗೆ ಸೇರಿಸಿ ಕಡ್ಡಾಯವಾಗಿ ಶಿಕ್ಷಣವನ್ನು ನೀಡುವಂತೆ ಸೂಚಿಸಿದರು.

ಈ ವೇಳೆ ರಾಯಚೂರು 1 ಹಾಗೂ 2ನೇ ಕಾರ್ಮಿಕ ವೃತ್ತ ನಿರೀಕ್ಷಕರಾದ ಕುಮಾರಿ ಪ್ರಿಯಾಂಕ ಅವರು ಮಾತನಾಡಿ, ಜೀತ ಪದ್ಧತಿ ನಿರ್ಮೂಲನೆಗಾಗಿ 1976ರಲ್ಲಿ ಕಾಯ್ದೆ ಜಾರಿ ಬಂದಿರುವ ಕುರಿತು ಜೀತ ಪದ್ಧತಿ ನಿರ್ಮೂಲನೆ ಕುರಿತು ಪ್ರತಿಜ್ಞಾ ವಿಧಿ ಬೋಧಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ರಿಯಾಜ್ ಪಟೇಲ್ ವರ್ಕನಳ್ಳಿ, ಇಟ್ಟಿಗೆ ಭಟ್ಟಿ ಮಾಲೀಕರಾದ ಈರಣ್ಣ ಸೇರಿದಂತೆ ಕಾರ್ಮಿಕ ಇಲಾಖೆಯ ಸಿಬ್ಬಂದಿ ಹಾಗೂ ಸ್ಥಳೀಯ ವಿವಿಧ ಇಟ್ಟಿಗೆ ಭಟ್ಟಿಗೆಗಳ ಮಾಲೀಕರು ಮತ್ತು ಕಾರ್ಮಿಕರು ಇದ್ದರು.

ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ಅಭ್ಯಾಸ ಮಾಡಿ - ಹಾಜಿಚೌದ್ರಿ

ತಾಯಿ, ಗುರುಗಳಿಗೆ ಕೀರ್ತಿ ತಂದುಕೊಡುವ ಸಾಧನೆ ಮಾಡಬೇಕು ಎಂದರು.

ವಿದ್ಯಾರ್ಥಿನಿಯರು ತಮ್ಮ ಅನಿಸಿಕೆ ಹೇಳಿದರು. ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಚಾರ್ಯರಾದ ಹನುಮಂತ ಚನ್ನೂರು, ಅಥಿತಿಯಾಗಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಹನುಮಂತ, ಬಾಲಕರ ಪ್ರೌಢಶಾಲೆಯ ಪ್ರಭಾರಿ ಮು.ಗು. ಗಿರಿಜಾ, ಪತ್ರಕರ್ತ ಸಂಘದ ಅದ್ಯಕ್ಷ ಹನುಮೇಶ, ಕಸಾಪ ನಿಕಟ ಪೂರ್ವ ಅದ್ಯಕ್ಷ ಸುರೇಶ ಹೀರಾ, ಎಸ್ ಡಿ ಎಂ ಸಿ ಅದ್ಯಕ್ಷ ಎಂ.ಡಿ ರಫಿ, ಉಪನ್ಯಾಸಕರಾದ ಫರಿದ್, ಲಕ್ಷ್ಮಣ, ಯಾಸಿನ್ ಇನ್ನಿತರರು ಇದರು.

ಕಾಯಕ ಶರಣರ ವಚನಗಳು ಸಮಾಜಕ್ಕೆ ದಾರಿ ದೀಪವಾಗಿವೆ - ಡಾ. ಬಿರಾದಾರ

ಅದ್ಭುತವನ್ನು ಕಣ್ಣಾರೆ ಕಾಣುತ್ತಾನೆ.ತಾನು ಶಿವ ದಿಕ್ಷೆಯನ್ನು ಪಡೆಯಬೇಕೆಂದು ಹಂಬಲದಿಂದ ಗುರುಲಿಂಗ ದೇವರನ್ನು ಬೇಡಿಕೊಳ್ಳುತ್ತಾನೆ.ಕಳ್ಳನಾದ ಉರುಲಿ0 ಗಪೆದ್ದಿಗೆ ಶಿವ ದಿಕ್ಷೆ ಹೇಗೆ ಕೊಡುವುದು ಎಂದು ಕೈಯಲ್ಲಿದ್ದ ಕಲ್ಲನ್ನೇ ಇದೇ ಲಿಂಗವೆಂದು ಪೂಜಿಸು ಎಂದು ಕೊಡುತ್ತಾರೆ. ನಿಷ್ಠೆಯಿಂದ ಅದನ್ನು ಪೂಜೆ ಮಾಡುತ್ತಾನೆ ಅದು ಲಿಂಗವಾಗಿ ಪರಿವರ್ತನೆಗೊಳ್ಳುತ್ತದೆ. ಮುಂದೆ ಆತನ ಸಂಪೂರ್ಣವಾಗಿ ಪರಿವರ್ತನೆ ಹೊಂದಿ ಹಲವಾರು ವಚನಗಳನ್ನು ಬರೆದು ಸಮಾಜದ ಅಂಕು ಡೊಂಕು ಗೊಡ್ಡು ಸಂಪ್ರದಾಯಗಳನ್ನು ತೆಗೆದು ಹಾಕುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ತಮ್ಮ ಕಾಯಕವನ್ನು ಮಾಡುತ್ತಾ ಹಲವಾರು.ವಚನ ಬರೆಯುತ್ತಾರೆ . ಉರುಲಿಂಗಪೆದ್ದಿಣ ಇವರ ವಚನಾಂಕಿತ,ಉರುವಲಿ0ಗ ಪೆದ್ದಿ ಪ್ರೇಯ ವಿಶ್ವೇಶ್ವರ ಎಂದು ಇದೆ. ಕಾಯಕ ಶರಣರು ಮಾಡಿದ ಕೆಲಸ. ಕಾರ್ಯ. ಮತ್ತು ಅವರ ವಚನಗಳು ನಮಗೆ ದಾರಿ ದೀಪವಾಗಿವೆ ಎಂದು ದಿನಾಂಕ 10.02.2026ರಂದು ರಾಯಚೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ ಉಡಮಗಲ್ ಖಾನಾಪುರದಲ್ಲಿ ಶಾಲೆಯಲ್ಲಿ ನಡೆದ ಕಾಯಕ ಶರಣರ ಜಯಂತಿಯ ಕಾರ್ಯಕ್ರಮದಲ್ಲಿ ಆಲ್ಗೊಂಡು ಶಾಲೆಯ ಕನ್ನಡ ಕಲಾ ಶಿಕ್ಷಕರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ. ಕಾರ್ಯದರ್ಶಿಯಾದ ಡಾ. ದಂಡಪ್ಪ ಬಿರಾದಾರ ಮಾತನಾಡಿದರು.ಶಾಲಾ ಮುಖ್ಯಗುರುಗಳಾದ ವೀರೇಶ್ ಅಂಗಡಿ ಮಾತನಾಡುತ್ತಾ 12ನೇ ಶತಮಾನದ ಶರಣರ ವಿಚಾರಗಳು ನಮ್ಮ ಬದುಕಿಗೆ ಬಹಳಷ್ಟು ಸಹಾಯಕವಾಗುತ್ತವೆ. ಅವರು ರಚನೆ ಮಾಡಿದ ವಚನಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕು. ಕಾಯಕ ಶರ ಣ ವಚನಗಳನ್ನು ಎಲ್ಲರೂ ಅಭ್ಯಾಸ ಮಾಡಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕ ವೃಂದದವರಾದ.ನಫಿಜ ಅಂಜುಮ್. ಪಾಂಡುರಂಗ ದೇಸಾಯಿ.ವೀಣಾ ಕುಲಕರ್ಣಿ.ಶಿವಲೀಲಾ. ಅನಿತಾ.ಎನ್ ಉಪಸ್ಥಿತರಿದ್ದರು . ಶಾಲಾ ಸಿಬ್ಬಂದಿ ನೀಲಕಂಠ ಕಾರ್ಯಕ್ರಮ ಆಯೋಜನೆ ಮಾಡುವಲ್ಲಿ ಸಹಕರಿಸಿದನು.ಜಾನಕಿ ಸ್ವಾಗತಿಸಿದಳು. ಪೂರ್ಣಿಮಾ ಕೊನೆಯಲ್ಲಿ ವಂದಿಸಿದಳು.

ಇಂಥವರು ಇರುತ್ತಾರೆ:: ಲಕ್ಷಾಂತರ ಬೆಲೆಬಾಳುವ ಭೂಮಿ ಶಾಲೆಗೆ ದಾನ, ವೇತನವಿಲ್ಲದೆ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕ ಬಸವರಾಜ ಮಾಲಿಪಾಟೀಲ್

ದೂರದೃಷ್ಟಿಯಿಂದ ಶಾಲೆಗೆ ಭೂಮಿ ನೀಡಿದ್ದಲ್ಲದೆ ಉಚಿತವಾಗಿ ಹಿಂದಿ ಪಾಠವನ್ನು ಮಾಡುತ್ತಿದ್ದಾರೆ ಎಂದರೆ ಅವರ ಸೇವೆ ಬೆಲೆಕಟ್ಟಲಾಗದ ಸೇವೆಯಾಗಿದೆ ಸರಕಾರ ಇಂತವರನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಇಂತಹ ಮನಸುಗಳು ಇನ್ನು ಹೆಚ್ಚಾಗಬಹುದು ಹಲವಾರು ಸ್ವಹಿತಾಸಕ್ತಿಗಳ ನಡುವೆ ಇಂತಹ ಅಪರೂಪದ ವ್ಯಕ್ತಿಗಳು ಇರುತ್ತಾರೆ ಅಲ್ಲವೇ!!?



ಸಿರುಗುಪ್ಪ : ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಾಂಗದ 20 ಫಲಾನುಭವಿಗಳಿಗೆ ಬೋರ್ ವೆಲ್ ಸಾಮಗ್ರಿ ವಿತರಿಸಿದ ಶಾಸಕ ಬಿ ಎಂ ನಾಗರಾಜ

ಸಿರುಗುಪ್ಪ ,ಫೆ.11-

ತಾಲೂಕು ಪಂಚಾಯತ್ ಆವರಣದಲ್ಲಿ ಸಣ್ಣ ನೀರಾವರಿ ಇಲಾಖೆ ಬಳ್ಳಾರಿ ಇಲಾಖೆಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಎಸ್ ಸಿ ಎಸ್ ಟಿ ಜನಾಂಗದ ತಲಾ 10 ರಂತೆ 20 ಫಲಾನುಭವಿಗಳಿಗೆ ಬೋರ್ ವೆಲ್ ಕೊರೆದು ಅದಕ್ಕೆ ಬೇಕಾದ ಸಾಮಗ್ರಿಗಳು ಪೈಪುಗಳು ಮೋಟಾರ್ ಗಳು ಪಂಪು ಸ್ಟಾರ್ಟರ್ ಗಳನ್ನು ಜನಪ್ರಿಯ ಶಾಸಕ ಬಿ ಎಂ ನಾಗರಾಜ ಅವರು ವಿತರಿಸಿ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು ಈ ಸಂದರ್ಭದಲ್ಲಿ ಇಂಜಿನಿಯರ್ ತಿಪ್ಪೇಸ್ವಾಮಿ ಮುಖಂಡರಾದ ಬಿ.ವೆಂಕಟೇಶ್,ಹೆಚ್.ಗಣೇಶ್, ಗೊರವರ ಶ್ರೀನಿವಾಸ್, ಜಾಜಿ ರಾಮಣ್ಣ, ಚಿದಾನಂದ ರಾಯಡು, ಅಬ್ದುಲ್ ನಬಿ ಫಲಾನುಭವಿಗಳು ಇದ್ದರು.

ಮಹಾ ಶಿವರಾತ್ರಿ ಪ್ರಯುಕ್ತ ಜೇನು, ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಮೇಳ-2026

ಫೆ. 12 ರಿಂದ 16 ವರೆಗೆ ವಿವಿಧ ಹಣ್ಣುಗಳು, ಅಣಬೆ, ಜೇನು ಪ್ರದರ್ಶನ ಮತ್ತು ಮಾರಾಟ ಮೇಳ

ಕೊಪ್ಪಳ, ಫೆ.11-

ರೈತರಿಂದ ನೇರವಾಗಿ ಗ್ರಾಹಕರಿಗೆ, ರೈತರಿಂದ ಖರೀದಿಸಿ ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೊಪ್ಪಳ ತೋಟಗಾರಿಕೆ ಇಲಾಖೆಯಿಂದ ಮಹಾ ಶಿವರಾತ್ರಿ ಪ್ರಯುಕ್ತ ''ದ್ರಾಕ್ಷಿ, ದಾಳಿಂಬೆ, ಪೇರಲ, ಅಂಜೂರ, ಕಲ್ಲಂಗಡಿ, ಕರಬೂಜ, ಬಾಳೆ, ಪಪ್ಪಾಯ, ಹಲಸು, ಜೇನು ಹಾಗೂ ಅಣಬೆ ಪ್ರದರ್ಶನ ಮತ್ತು ಮಾರಾಟ ಮೇಳ-2026 ನ್ನು ಫೆಬ್ರವರಿ 12 ರಿಂದ ಫೆ. 16 ರವರೆಗೆ ನಗರದ ತೋಟಗಾರಿಕೆ ಜಂಟಿ ನಿರ್ದೇಶಕರ ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದ್ದು, ಉದ್ಘಾಟನಾ ಸಮಾರಂಭ ಫೆ. 12 ರ ಬೆಳಿಗ್ಗೆ 10.30 ಗಂಟೆಗೆ ನಡೆಯಲಿದೆ.

ಮೇಳವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಉದ್ಘಾಟಿಸವರು. ತೋಟಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಮಂತ್ರಿ ಎಸ್. ಎಸ್. ಮಲ್ಲಿಕಾರ್ಜುನ, ಕುಷ್ಟಗಿ ವಿಧಾನಸಭಾ ಕ್ಷೇತ್ರ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರು ದೊಡ್ಡನಗೌಡ ಹನಮಗೌಡ ಪಾಟೀಲ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತದ ಅಧ್ಯಕ್ಷರು ಹಾಗೂ ಕೊಪ್ಪಳ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ. ನಮೋಶಿ, ಡಾ.ಚಂದ್ರಶೇಖರ ಬಿ. ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ್ ಬಯ್ಯಾಪೂರ, ಹೇಮಲತಾ ನಾಯಕ, ಮುನಿರಾಬಾದ್‌ನ ತುಂಗಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಹಸನ್ ಸಾಬ್ ನಬಿಸಾಬ ದೋಟಿಹಾಳ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ಗಡಾದ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ್ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ವಸತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಬಾಗಲಕೋಟೆಯ ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಆಯುಕ್ತರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನರಾಜ್, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಆರ್. ಗಿರೀಶ್, ಕೊಪ್ಪಳ ಜಿಲ್ಲಾಧಿಕಾರಿ ಡಾ.ಸುರೇಶ ಬಿ. ಇಟ್ನಾಳ, ಬೆಂಗಳೂರು ಲಾಲ್‌ಬಾಗ್‌ನ ತೋಟಗಾರಿಕೆ ನಿರ್ದೇಶಕರಾದ ಇಬ್ರಾಹಿಂ ಮೈಗೂರ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ರಾಮ್ ಎಲ್. ಅರಸಿದ್ದಿ, ತೋಟಗಾರಿಕೆ ಅಪರ ನಿರ್ದೇಶಕರಾದ ಕೆ. ಎಂ. ಪರಶಿವಮೂರ್ತಿ, ಲಾಲ್‌ಬಾಗ್‌ನ ತೋಟಗಾರಿಕೆ ಅಪರ ನಿರ್ದೇಶಕರಾದ(ಹಣ್ಣುಗಳು) ಡಾ. ಪಿ.ಎಂ.ಸೊಬರದ, ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜೆನ್ಸಿ (ರಿ.) ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಕೊಪ್ಪಳ ಜಿಲ್ಲಾ ನೋಡಲ್ ಅಧಿಕಾರಿ ಕೆ. ಬಿ. ದುಂಡಿ, ಲಾಲ್‌ಬಾಗ್‌ನ ತೋಟಗಾರಿಕೆ ಅಪರ ನಿರ್ದೇಶಕರು(ತಾಳೆ ಬೆಳೆ) ಡಾ. ಎಸ್. ನಂದಾ , ಮುನಿರಾಬಾದ್ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಪ್ರಭುಲಿಂಗ ಜಿ., ಜಿಲ್ಲಾ ಹಾಪ್ ಕಾಮ್ಸ್ ಅಧ್ಯಕ್ಷ ಯಂಕಣ್ಣ ಯರಾಶಿ, ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಶೇಖರಗೌಡ ಮಾಲೀಪಾಟಲ್, ಕೊಪ್ಪಳದ ಅಭಿನವ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆ ನಿರ್ದೇಶಕ ಕೆ. ಶಿವರಾಮಪ್ಪ ಭಾಗವಹಿಸುವರು.

ಮೇಳದಲ್ಲಿ ಜೇನು ಸಾಕಾಣಿಕೆ ಕುರಿತು ತಾಂತ್ರಿಕ ಕಾರ್ಯಾಗಾರವನ್ನು ಆಯೋಜಿಸಲಾಗಿದ್ದು, ಪಾರಂಪರಿಕ ವೈದ್ಯರು ಹಾಗೂ ಜೇನು ಕೃಷಿ ತಜ್ಞರಾದ ಡಾ.ಮಧುಕೇಶ್ವರ ಜಿ.ಹೆಗಡೆ ಕಾರ್ಯಾಗಾರ ನಡೆಸಿಕೊಡುವರು. ಮೇಳದಲ್ಲಿ ಕೊಪ್ಪಳದ ಅಭಿನವಶ್ರೀ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆ, ಕನಕಗಿರಿಯ ರೈತ ಜೀವ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆ, ಕುಷ್ಟಗಿಯ ಕಪಿಲತೀರ್ಥ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆ, ತಾವರಗೇರಿಯ ಅಮೃತವರ್ಷಿಣಿ ರೈತ ಉತ್ಪಾದಕರ ಸಂಸ್ಥೆ,

ಬೇವೂರಿನ ಯಲಬುರ್ಗಾ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆ, ಕುಕನೂರಿನ ಗಂಧ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆ, ಹಿರೇಸಿಂದೋಗಿಯ ಕಾಯಕ ಕೃಷಿ ಮಿತ್ರ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆ, ದಮ್ಮೂರಿನ ರೈತನ ಬೆಳಕು ರೈತ ಉತ್ಪಾದಕರ ಸಂಸ್ಥೆ, ಕೊಪ್ಪಳದ ರೈತ ಜಾಗೃತಿ ರೈತ ಉತ್ಪಾದಕರ ಸಂಸ್ಥೆ, ಕನಕಗಿರಿಯ ತಪಸ್ಸು ರೈತ ಉತ್ಪಾದಕರ ಸಂಸ್ಥೆ, ಕುಷ್ಟಗಿಯ ಸ್ನೇಹಿತರು ರೈತ ಉತ್ಪಾದಕರ ಸಂಸ್ಥೆಗಳು ಭಾಗವಹಿಸಲಿವೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕರಾದ ಕೃಷ್ಣ ಸಿ.ಉಕ್ಕುಂದ ಹಾಗೂ ಕೊಪ್ಪಳದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಮಂಜುನಾಥ ಲಿಂಗಣ್ಣವರ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



21ರಂದು ಬೃಹತ್ ಉದ್ಯೋಗ ಮೇಳ: 50ಕ್ಕೂ ಹೆಚ್ಚು ವಿವಿಧ ಕಂಪನಿಗಳು ಭಾಗಿ

ವಿಜಯನಗರ, ಫೆ.11-

ಫೆಬ್ರವರಿ 21 ರಂದು ನಗರದ ವಿಜಯನಗರ ಕಾಲೇಜ್‌ನಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, 50ಕ್ಕೂ ಅಧಿಕ ಕಂಪನಿಗಳು ಭಾಗವಹಿಸಲಿವೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ, ಜೀವನೋಪಾಯ ಇಲಾಖೆ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಾಗೂ ವಿಜಯನಗರ ಕಾಲೇಜು ಇವರ ಸಹಯೋಗದಲ್ಲಿ ಸೋಮವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉದ್ಯೋಗ ಮೇಳದಲ್ಲಿ ರಾಜ್ಯದ ವಿವಿಧ ಪ್ರತಿಷ್ಠಿತ 50ಕ್ಕೂ ಹೆಚ್ಚು ಎಮ್‌ಎನ್‌ಸಿ ಕಂಪನಿಗಳು ಭಾಗವಹಿಸಲಿವೆ. ಇದರಿಂದ ಜಿಲ್ಲೆಯ ನಿರುದ್ಯೋಗ ಯುವಕ ಯುವತಿಯರಿಗೆ ಸಾಕಷ್ಟು ಉದ್ಯೋಗ ಸಿಗಲಿದೆ. ಜಿಲ್ಲೆಯ ಯುವಕ ಯುವತಿಯರಿಗೆ, ವಿಶೇಷವಾಗಿ ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಥಮಾದ್ಯತೆ ನೀಡಲಾಗುವುದು. ಈ ಸುವರ್ಣಾವಕಾಶವನ್ನು ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಆಸಕ್ತರು 18 ವರ್ಷದಿಂದ 35 ವರ್ಷ ಒಳಗಿನ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೋಮೋ, ನರ್ಸಿಂಗ್, ಇಂಜಿನಿಯರಿಂಗ್, ಬಿಕಾಂ, ಬಿಎಸ್ಸಿ, ಬಿಎ, ಬಿಬಿಎ, ಬಿಎಚ್ ಎಂ, ಎಂಕಾಂ, ಎಂಬಿಎ, ಎಂಎಸ್ಸಿ, ಎಂಎ ಪದವಿ ವಿದ್ಯಾರ್ಹತೆ ಹೊಂದಿದವರು ಈ ಮೇಳದಲ್ಲಿ ಭಾಗವಹಿಸಬಹುದು ಎಂದರು.

ಇದೇ ಸಂದರ್ಭದಲ್ಲಿ ಡಿಸಿ ಕವಿತಾ ಎಸ್.ಮನ್ನಿಕೇರಿ ಉದ್ಯೋಗ ಮೇಳ ಕರಪತ್ರ, ಬಿಡುಗಡೆಗೊಳಿಸಿದರು.

ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ನಗರದ ವಿಜಯನಗರ ಕಾಲೇಜು ಅಥವಾ ದೂ,ಸಂ: 7975278783, 9986779624 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ಮಹ್ಮದ್ ಅಲಿ ಅಕ್ರಂ ಷಾ, ವಿಜಯನಗರ ಕಾಲೇಜು ಅಧ್ಯಕ್ಷ ಮೆಟ್ರಿ ಮಲ್ಲಿಕಾರ್ಜುನ, ಪ್ರಾಂಶುಪಾಲ ಎ.ಮಹಾಂತೇಶ್ ಸೇರಿದಂತೆ ವಿವಿಧ ಕಂಪನಿಗಳ ಮುಖ್ಯಸ್ಥರು ಇದ್ದರು.

ಆಶಾ ಕಾರ್ಯಕರ್ತೆಯರಿಗೆ ಮಕ್ಕಳ ಸುಕರ್ಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮ



ಕೊಪ್ಪಳ ಫೆ.11-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ಫೆ.6 ರಂದು ಗಂಗಾವತಿ ತಾಲೂಕಿನ ಆಶಾ ಕಾರ್ಯಕರ್ತೆಯರಿಗೆ ''ಮಕ್ಕಳ ಹಕ್ಕುಗಳು, ಕಾನೂನುಗಳು ಮತ್ತು ಮಕ್ಕಳ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮ'' ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಬಾಲ್ಯವಿವಾಹಗಳ ಪ್ರಮಾಣ ಶೇ.27.1 ಇದ್ದು, ಕಳೆದ ಸಾಲಿನಿಂದ ಇದು ಇಳಿಮುಖವಾಗುತ್ತಿದ್ದು, ಆದಾಗ್ಯೂ ಇನ್ನೂ ಸಹ ಜಿಲ್ಲೆಯಲ್ಲಿ ಅಧಿಕಾರಿಗಳ ಗಮನಕ್ಕೆ ಬರದಂತೆ ಬಾಲ್ಯವಿವಾಹ ನಡೆಯುತ್ತಿರುವುದನ್ನು ತಿಳಿಸುತ್ತಿದೆ. ಜಿಲ್ಲೆಯನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಸಮುದಾಯದಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಜಾಗೃತಿಯನ್ನು ಮೂಡಿಸುವುದು ಅತ್ಯವಶ್ಯಕವಾಗಿದೆ. ಆದ್ದರಿಂದ ಗ್ರಾಮ ಮಟ್ಟದಲ್ಲಿ ವಿವಿಧ ರೀತಿಯಲ್ಲಿ ಜಾಗೃತಿಯನ್ನು ಮೂಡಿಸಲು ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಆಶಾ ಕಾರ್ಯಕರ್ತೆಯರಿಗೆ ಮಕ್ಕಳ ಹಕ್ಕುಗಳು, ಕಾನೂನುಗಳ ಮತ್ತು ಮಕ್ಕಳ ಸುರಕ್ಷತೆ ಕುರಿತು ಸಾಮರ್ಥ್ಯವನ್ನು ವೃದ್ಧಿಸಿ ಸಮುದಾಯಗಳಲ್ಲಿ ಜಾಗೃತಿಯನ್ನು ಮೂಡಿಸಿ, ತನ್ಮೂಲಕ ಬಾಲ್ಯವಿವಾಹಗಳನ್ನು ತಡೆದು ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಗಂಗಾವತಿ ತಾಲೂಕು ವೈದ್ಯಾಧಿಕಾರಿ ಡಾ. ಗೌರಿಶಂಕರ ಮಾತನಾಡಿ, ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015 ರಡಿಯಲ್ಲಿ ಯಾರೇ ಪಾಲಕರು/ಪೋಷಕರಿಗೆ ಮಗು ಬೇಡವಾದಲ್ಲಿ ಅಂತಹ ಮಗುವನ್ನು ಎಲ್ಲೆಂದರಲ್ಲಿ ಬಿಸಾಡಿ ಮಗುವಿನ ಪ್ರಾಣಕ್ಕೆ ಎರವಾಗದೇ, ಅಂತಹ ಮಗುವನ್ನು 1098 ಮೂಲಕ ಅಥವಾ ನೇರವಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ವಶಕ್ಕೆ ನೀಡಬಹು ದಾಗಿದೆ. ನಂತರ ಸಮಿತಿಯು ಮಗುವನ್ನು ಕುಟುಂಬದ ವಾತಾವರಣ ದಲ್ಲಿ ಬೆಳಸಲು ಅಗತ್ಯ ಪುನರ್ವಸತಿಯನ್ನು ನಿಯಮಾನುಸಾರ ಕೈಗೊಳ್ಳುತ್ತದೆ. ಅಕ್ರಮ ದತ್ತು ಶಿಕ್ಷಾರ್ಹ ಅಪರಾಧವಾಗಿದೆ. ನಿಯಮ ಬಾಹಿರವಾಗಿ ದತ್ತು ಪಡೆದಲ್ಲಿ ಅಂತಹ ಪಾಲಕರು ಮತ್ತು ದತ್ತು ನೀಡಿದ ಪೋಷಕರಿಗೂ ಸಹ ಶಿಕ್ಷೆಯನ್ನು ವಿಧಿಸಬಹುದಾಗಿದ್ದು, ಈ ಕುರಿತು ಸಮುದಾಯಗಳಲ್ಲಿ ಆಶಾ ಕಾರ್ಯಕರ್ತೆರು ಜಾಗೃತಿಯನ್ನು ಮೂಡಿಸಿ ಮಕ್ಕಳಿಗೆ ಸುರಕ್ಷಿತ ವಾತಾವರಣ ನಿರ್ಮಿಸಲು ಸಹಕರಿಸಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯ ಮತ್ತು ಶಿಕ್ಷಣಾಧಿಕಾರಿ ಆಶಾಬೇಗಂ, ಸಮುದಾಯ ಆರೋಗ್ಯ ಅಧಿಕಾರಿಗಳಾದ ದುರಗೇಶ, ಶೋಭಾ ಬಿ ಜಾಲಿ, ಲೀಗಲ್ ಕಂ ಪ್ರೊಬೇಷನ ಆಫೀಸರ್ ಶಿವಲೀಲಾ ವನ್ನೂರು, ರಕ್ಷಣಾಧಿಕಾರಿಗಳು(ಅಸಾಂಸ್ಥಿಕ) ಪ್ರಶಾಂತ ರೆಡ್ಡಿ, ರವಿಕುಮಾರ ಪವಾರ, ಗಂಗಾವತಿ ತಾಲೂಕಿನ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

19 ರಂದು ಛತ್ರಪತಿ ಶಿವಾಜಿ ಜಯಂತಿ ವಿಜೃಂಭಣೆಯಿಂದ ಆಚರಿಸಲು ನಿರ್ಧಾರ

ಕಲಬುರಗಿ, ಫೆ.10-

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಛತ್ರಪತಿ ಶಿವಾಜಿ ಜಯಂತಿಯನ್ನು ಫೆಬ್ರವರಿ 19 ರಂದು ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ ಅವರ ಸಭೆಯಲ್ಲಿ ನಿರ್ಧರಿಸಲಾಯಿತು.

ಶನಿವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಫೆಬ್ರವರಿ 19 ರಂದು ಗುರುವಾರ ಮಧ್ಯಾಹ್ನ 1 ಗಂಟೆಗೆ ಕಲಬುರಗಿ ನಗರದ ಡಾ. ಎಸ್.ಎಂ ಪಂಡಿತ ರಂಗಮಂದಿರದಲ್ಲಿ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮ ಜರುಗಲಿದ್ದು, ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ಆರ್. ಬಿ. ಜಗದಾಳಿ ಅಧ್ಯಕ್ಷರು ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತು ಕಲಾ ಉಪನ್ಯಾಸಕರಾಗಿ ಸತೀಶ್ ಹಾನೆಗಾಂವ ಜಗದ್ಗುರು ತುಕೊಬಾರಾಯ ಸಾಹಿತ್ಯ ಪರಿಷತ್ ಸಂಘಟಕರು ಮಹಾರಾಷ್ಟ್ರ ಹಾಗೂ ಡಾ.ಸುರೇಶ ಜಾಧವ ನಿವೃತ್ತ ಕನ್ನಡ ಉಪನ್ಯಾಸಕರು ಕಾರ್ಯಕ್ರಮದ ನಿರೂಪಕರನ್ನಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿ ಸಿಬ್ಬಂದಿ ಗೌರಮ್ಮ ವಿ ಢೋಂತಾ ಅವರು ಪ್ರೋಟೋಕಾಲ್ ಪ್ರಕಾರ ಕಾರ್ಯಕ್ರಮ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ವೇದಿಕೆ ಮೇಲೆ ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ, ಅಮರನಾಥ. ಜೆ. ಭೋಸ್ಲೆ, ರಮೇಶ ಚಿಚಕೋಟೆ, ಅಭಿಮನ್ಯು. ಆರ್. ಫಾಳ್ಕೆ, ಆರ್.ಬಿ.ಜಗದಾಳೆ, ನಾರಾಯಣ ರಾವ್, ಸಂದೀಪ್. ಡಿ.ಭೋಸ್ಲೆ, ದಿನಕರ್ ಫಾಳ್ಕೆ, ರಾಜು. ಎಲ್. ಕಾಕಡೆ ಹಾಗೂ ಸಮಾಜದ ಮುಖಂಡರಾದ ಇತರರು ಉಪಸ್ಥಿತರಿದ್ದರು.

ತಾಲ್ಲೂಕುಗಳ ಅಭಿವೃದ್ಧಿಗೆ ಅಧಿಕಾರಿಗಳು ಶ್ರಮಿಸಬೇಕು: ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್

ಕಲಬುರಗಿ,ಫೆ.11-



ಗನ್ ತೋರಿಸಿ ಡ್ಯಾನ್ಸ್ ಮಾಡಿರುವ ವೀಡಿಯೋ ವೈರಲ್ ಆದ ಬೆನ್ನಲ್ಲೆ ಕಾಂಗ್ರೆಸ್ ಮುಖಂಡ ಮತೀನ್ ಪಟೇಲ್ ವಿರುದ್ಧ ಇಲ್ಲಿನ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಫಜಲಪುರ ಶಾಸಕ ಎಂ.ವೈ.ಪಾಟೀಲ್ ಅವರ ಆಪ್ತರಲ್ಲಿ ಗುರುತಿಸಿಕೊಂಡಿರುವ ಕಾಂಗ್ರೆಸ್ ಮುಖಂಡ ಮತೀನ್ ಪಟೇಲ್, ಇತ್ತೀಚೆಗೆ ಕಲಬುರಗಿ ನಗರದ ತಮ್ಮ ತಂಗಿಯ ಮಗಳ ಮದುವೆ ಪೂರ್ವದ ಕಾರ್ಯಕ್ರಮವೊಂದರಲ್ಲಿ ಗನ್ ತೋರಿಸಿ, ಡ್ಯಾನ್ಸ್ ಮಾಡಿರುವ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಈ ಕುರಿತಾಗಿ ಪರಿಶೀಲಿಸಿದ ನಗರ ಪೊಲೀಸರು, ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕವಾಗಿ ಶಸ್ತ್ರಾಸ್ತ್ರ ಪ್ರದರ್ಶಿಸಿದ್ದ ಮತೀನ್ ಪಟೇಲ್ ವಿರುದ್ಧ ಕಲಬುರಗಿ ನಗರದ ಚೌಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಚೌಕ್ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂಬರ್ 33/2026 ಕಲಂ 30 ಆರ್ಮ್ಸ್ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಖುದ್ದು ರಾಜಧರ್ಮ ಪಾಲಿಸಲಿಲ್ಲ ಮೋದಿಯವರು, ಹಿಮಂತರಿಗೆ ಹೇಗೆ ಉಪದೇಶ ನೀಡಬಲ್ಲರು ಪಾಪ?



ರಾಜಧರ್ಮವನ್ನು ಪಾಲಿಸಬೇಕು ಎಂದು ಅಂದಿನ ಪ್ರಧಾನಿ ವಾಜಪೇಯಿ ಅವರು, ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರಿಗೆ ಪತ್ರಿಕಾಗೋಷ್ಠಿಯಲ್ಲಿ ಬಹಿರಂಗವಾಗಿ ಬುದ್ಧಿ ಹೇಳಿದ್ದರು. ಅದೇ ನರೇಂದ್ರ ಮೋದಿಯವರೇ ಈಗ ಪ್ರಧಾನಮಂತ್ರಿಯಾಗಿದ್ದಾರೆ.

ಅಸ್ಸಾಮ್ ಮುಖ್ಯಮಂತ್ರಿ ಹಿಮಂತ ಬಿಸ್ವ ಸರ್ಮಾ ಅವರು ತಲೆಬುರುಡೆಗೆ ಅಂಟಿದ ಟೋಪಿ ಧರಿಸಿದ ಪುರುಷರತ್ತ ಕೋವಿಯನ್ನು ಗುರಿಯಿಟ್ಟು ಗುಂಡು ಹಾರಿಸುವ ಎಐ ವಿಡಿಯೋವೊಂದನ್ನು ಆ ರಾಜ್ಯದ ಬಿಜೆಪಿ ಕಳೆದ ಶನಿವಾರ ಸಾಮಾಜಿಕ ಜಾಲತಾಣಗಳಿಗೆ ಬಿಡುಗಡೆ ಮಾಡಿತು. 17 ಸೆಕೆಂಡುಗಳ ಈ ವಿಡಿಯೋ ಮೇಲೆ ಪಾಯಿಂಟ್ ಬ್ಲ್ಯಾಂಕ್ ಶಾಟ್, ನೋ ಮರ್ಸಿ ಎಂಬ ಬರೆಹವಿತ್ತು. ದಯೆ ದಾಕ್ಷಿಣ್ಯವಿಲ್ಲ- ಸೀದಾ ಗುಂಡು ಹಾರಿಸುವುದೇ ಸೈ ಎಂಬ ಅರ್ಥದ ಬರೆಹವಿದು. ವಿದೇಶೀ ಮುಕ್ತ ಅಸ್ಸಾಮ್ ಎಂಬ ಘೋಷಣೆಗಳು ವಿಡಿಯೋದ ಹಿನ್ನೆಲೆಯಲ್ಲಿ ಮೊಳಗಿದ್ದವು. ಯಾರ ಕೋವಿಯಿಂದ ಹಾರಿದ ಗುಂಡು, ಕೊಂದಿದ್ದು ಯಾರನ್ನು ಎಂಬ ಸಂದೇಶ ನಿಚ್ಚಳವಿತ್ತು.

ಅಸ್ಸಾಮ್ ಬಿಜೆಪಿ ಈ ವಿಡಿಯೋವನ್ನು ಮರುದಿನ ಸದ್ದಿಲ್ಲದೆ ಡಿಲೀಟ್ ಮಾಡಿತು. ವಿಡಿಯೋ ಕುರಿತು ತಮಗೇನೂ ತಿಳಿಯದು ಎಂದು ಸರ್ಮಾ ಹೇಳಿದ್ದಾರೆ. ಆದರೆ ವಿಡಿಯೋವನ್ನು ಖಂಡಿಸುವುದಿರಲಿ, ಕ್ಷೀಣ ಆಕ್ಷೇಪವನ್ನು ಕೂಡ ಅವರು ಪ್ರಕಟಿಸಿಲ್ಲ. ಅವರಿಂದ ಇಂತಹ ನಿರೀಕ್ಷೆ ಯಾರಿಗೂ ಇರಲಾರದು. ಈ ವಿಡಿಯೋದಷ್ಟೇ ಕ್ರೂರ ಮತ್ತು ಅಮಾನುಷ ಟೀಕೆ ಟಿಪ್ಪಣಿಗಳು, ಭರ್ತ್ಸನೆಗಳು, ನಿಂದನೆಗಳನ್ನು ಅವರು ಮುಸಲ್ಮಾನರ ವಿರುದ್ಧ ಮಾಡುತ್ತಲೇ ಬಂದಿದ್ದಾರೆ. ತಮ್ಮ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸಿದರೆ ತಮ್ಮ ಅಭ್ಯಂತರವಿಲ್ಲ, ಅಗತ್ಯ ಬಿದ್ದರೆ ದಸ್ತಗಿರಿಯಾಗಲೂ ತಾನು ತಯಾರು ಎಂದಿದ್ದಾರೆ. ನಾಲ್ಕರಿಂದ ಐದು ಲಕ್ಷ ಮಿಂಯಾ ಮುಸ್ಲಿಮರನ್ನು ಮತದಾರರ ಪಟ್ಟಿಯಿಂದ ತೆಗೆದೇ ತೆಗೆಯುತ್ತೇವೆ ಎಂದೂ ಸಾರಿದ್ದಾರೆ. ಮುಸಲ್ಮಾನರ ಮೇಲೆ ಊಟತಿಂಡಿಯ ಜಿಹಾದ್, ರಸಗೊಬ್ಬರ ಜಿಹಾದ್, ಜಮೀನಿನ ಜಿಹಾದ್ ಆರೋಪ ಮಾಡಿದ್ದಾರೆ. ತರಕಾರಿಗಳ ಬೆಲೆ ಏರಿಕೆಗೆ ಮಿಂಯಾಗಳೇ ಕಾರಣವೆಂದು ದೂರಿದ್ದಾರೆ. ಮುಸ್ಲಿಮರೇ ಬಹುಸಂಖ್ಯೆಯಲ್ಲಿರುವ ಸೀಮೆಗಳಲ್ಲಿ ಹಿಂದೂಗಳಿಗೆ ಕೋವಿ ಲೈಸೆನ್ಸ್ ನೀಡಬೇಕೆಂದಿದ್ದಾರೆ. ನಂಜಿನ ಎಣ್ಣೆಯಲ್ಲಿ ಅದ್ದಿ ತೆಗೆದು ಅದಕ್ಕೆ ಕೊಳ್ಳಿ ಇಟ್ಟಂತಿರುತ್ತವೆ ಅವರ ಮಾತುಗಳು. ಕೋಮು ಧ್ರುವೀಕರಣವೊಂದೇ ಸರ್ಮಾ ಮತ್ತು ಅವರ ಪಕ್ಷದ ಚುನಾವಣಾ ಯಶಸ್ಸಿನ ಮರ್ಮ.

ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯಲ್ಲಿ ಮಿಂಯಾಗಳಿಗೆ ಕಷ್ಟಕೋಟಲೆ ನೀಡುವುದೇ ತಮ್ಮ ಉದ್ದೇಶವಾಗಿದ್ದು, ಜನ ಕೂಡ ಅವರಿಗೆ ಕಿರುಕುಳ ಕೊಡಬೇಕೆಂದು ಸರ್ಮಾ ಇತ್ತೀಚಿನ ಸಭೆಯೊಂದರಲ್ಲಿ ಆಗ್ರಹಪಡಿಸಿದ್ದರು. ಸೈಕಲ್ ರಿಕ್ಷಾ ದರ ಐದು ರುಪಾಯಿಯಿದ್ದರೆ, ನಾಲ್ಕು ರುಪಾಯಿಯನ್ನು ಮಾತ್ರವೇ ಕೊಡಿ ಎಂದೂ ಕರೆ ನೀಡಿದ್ದರು. ಅವರು ಗುರಿ ಇಟ್ಟದ್ದು ರಿಕ್ಷಾ ಎಳೆಯುವ ಬಂಗಾಳಿ ಮೂಲದ ಮುಸಲ್ಮಾನರನ್ನು ಕುರಿತು.

ದ್ವೇಷ- ಹಿಂಸೆಗೆ ಪ್ರಚೋದನೆ ನೀಡುತ್ತದೆಯೆಂದು ಭಾರೀ ಪ್ರತಿಭಟನೆ ಖಂಡನೆ ಪ್ರಕಟವಾದವು. ನರಮೇಧಕ್ಕೆ ನೀಡಿರುವ ಕರೆಯಿದು ಎಂದು ಪ್ರತಿಪಕ್ಷಗಳು ಆಕ್ರೋಶ ವ್ಯಕ್ತಪಡಿಸಿವೆ. ಅಸ್ಸಾಮ್ ನ ಒಳಗೆ ಮತ್ತು ಹೊರಗೆ ಈ ವಿಡಿಯೋ ವಿರುದ್ಧ ದೂರುಗಳು ದಾಖಲಾಗಿವೆ. ಸಿಪಿಐಎಂ- ಸಿಪಿಐ ಸುಪ್ರೀಮ್ ಕೋರ್ಟಿನ ಕದ ಬಡಿದಿವೆ. ಸರ್ಮಾ ಅವರ ದ್ವೇಷ ಪ್ರಚೋದನೆಯ ಭಾಷಣಗಳು ಮತ್ತು ವಿಡಿಯೋ ವಿರುದ್ಧ ನ್ಯಾಯಾಲಯದ ನಿಗಾದಲ್ಲಿ ತನಿಖೆ ನಡೆಯಬೇಕೆಂದು ಕೋರಿದೆ.

ಅಸ್ಸಾಮ್ ವಿಧಾನಸಭಾ ಚುನಾವಣೆ ಒಂದೆರಡು ತಿಂಗಳುಗಳಲ್ಲೇ ನಡೆಯಬೇಕಿದೆ. ಪ್ರತಿಪಕ್ಷಗಳು ಒಡೆದು ದುರ್ಬಲವಾಗಿವೆ. ಅಭಿವೃದ್ಧಿಯ ಕೆಲಸ ಕಾರ್ಯಗಳ ಬಲದಿಂದಲೇ ಗೆಲ್ಲುವ ವಿಶ್ವಾಸ ಬಿಜೆಪಿಗೆ ಇಲ್ಲ. ಧ್ರುವೀಕರಣದ ಕಾರ್ಯಸೂಚಿ ಇಟ್ಟುಕೊಂಡೇ ಎರಡು ಸಲ ಗೆದ್ದಿರುವವರು ಇದೀಗ ಮೂರನೆಯ ಸಲವೂ ಆರಿಸಿ ಬರಲು ಅದೇ ಹಳೆಯ ತಂತ್ರಗಳಿಗೆ ಮೊರೆ ಹೋಗಿದ್ದಾರೆ. ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಛೂ ಬಿಡುವ ಮಂತ್ರ. ಧ್ರುವೀಕರಣದ ಕಿಚ್ಚು ಹಚ್ಚಲೆಂದೇ ಆಡುತ್ತಿರುವ ಮಾತುಗಳು ಮತ್ತು ಮಾಡಿರುವ ವಿಡಿಯೋ ಇದು ಎಂಬುದು ಸ್ಪಷ್ಟ.

ಈ ಪರಿಯ ದ್ವೇಷವು ದಿನ ಬೆಳಗಾಗುವುದರ ಒಳಗೆ ಮೈ ತಳೆದು ಹೂಂಕರಿಸಿಲ್ಲ. ವರ್ಷಗಟ್ಟಲೆ ಇಂತಹ ವಾತಾವರಣವನ್ನು ವ್ಯವಸ್ಥಿತವಾಗಿ ರೂಪಿಸಿ ಪೋಷಿಸಿ ಪ್ರೋತ್ಸಾಹಿಸುತ್ತ ಬರಲಾಗಿದೆ.

ಮಂತ್ರಿಯಾಗಿ ಅಥವಾ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವವರು ಸಂವಿಧಾನದ 164 (3) ಅನುಚ್ಛೇದದಡಿ ಪ್ರಮಾಣವಚನ ಸ್ವೀಕರಿಸಬೇಕಾಗುತ್ತದೆ. ಎಲ್ಲ ರೀತಿಯಿಂದಲೂ ಎಲ್ಲ ಜನರಿಗೂ ಸಂವಿಧಾನದ ಪ್ರಕಾರ ನ್ಯಾಯ ಒದಗಿಸುವ, ಯಾರ ಕುರಿತೂ ಭಯ ಮತ್ತು ಪಕ್ಷಪಾತ, ದುರ್ಭಾವನೆ ಇಲ್ಲದಂತೆ ನಡೆದುಕೊಳ್ಳುವ ಅಂಶಗಳು ಈ ಪ್ರಮಾಣವಚನದ ಭಾಗಗಳು. ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತೇನೆಂದು ಪ್ರಮಾಣ ಮಾಡುವುದರ ಅರ್ಥವೇನೆಂದರೆ ಸಂವಿಧಾನದ 14ನೆಯ ಅನುಚ್ಛೇದದ ಪ್ರಕಾರ ಸಮಾನತೆ, ಮತ್ತು 25ನೆಯ ಅನುಚ್ಛೇದದ ಪ್ರಕಾರ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಒಡಹುಟ್ಟಿದ ಭಾವವನ್ನು ಎತ್ತಿ ಹಿಡಿಯುವುದೇ ಆಗಿದೆ. ಎಲ್ಲ ಧರ್ಮಗಳು, ಜಾತಿಗಳ ಜನರನ್ನು ಸಮಾನವಾಗಿ, ಪೂರ್ವಗ್ರಹವಿಲ್ಲದೆ ನಡೆಸಿಕೊಳ್ಳುವುದೇ ಆಗಿದೆ. ದೇಶದ ಸಮಗ್ರತೆ ಮತ್ತು ಸಾರ್ವಭೌಮತೆಗೆ ಭಂಗ ಬರದಂತೆ ನಡೆದುಕೊಳ್ಳುವುದೇ ಆಗಿದೆ.

ಬಾಂಗ್ಲಾ ದೇಶೀಯರ ಅಕ್ರಮ ವಲಸೆಯ ಸಮಸ್ಯೆಯನ್ನು ಅಸ್ಸಾಮ್ ಎದುರಿಸಿರುವುದು ಸಂಪೂರ್ಣ ನಿರಾಧಾರವೇನೂ ಅಲ್ಲ. ಆದರೆ ಹಿಂದೂ ವಲಸಿಗರದು ಬಹುದೊಡ್ಡ ಸಂಖ್ಯೆ ಎಂದು ಅಂಕಿ ಅಂಶಗಳು ಹೇಳಿವೆ. ಮುಖ್ಯಮಂತ್ರಿಯವರು ಆಡುತ್ತ ಬಂದಿರುವ ದ್ವೇಷದ ಮಾತುಗಳು ಅಕ್ರಮ ವಲಸೆಯ ಜೊತೆಗೆ ಮುಸಲ್ಮಾನ ಅಸ್ಮಿತೆಯನ್ನು ತಳುಕು ಹಾಕಿವೆ. ಆದರೆ ಎನ್.ಆರ್.ಸಿ. ದತ್ತಾಂಶಗಳು ಹೇಳುವ ಸತ್ಯವೇ ಬೇರೆ. ಎನ್.ಆರ್.ಸಿ.ಯಿಂದ ಹೊರಗಿಡಲಾಗಿರುವವರ ಪೈಕಿ ಮುಸ್ಲಿಮರಲ್ಲದವರೇ ಬಹುಸಂಖ್ಯಾತರು ಎಂಬುದಾಗಿ ಎಡಪಕ್ಷಗಳು ಸುಪ್ರೀಮ್ ಕೋರ್ಟಿಗೆ ಅರಿಕೆ ಮಾಡಿಕೊಂಡಿವೆ.

ವಲಸೆ ಸಮಸ್ಯೆಗೆ ದ್ವೇಷಭಾಷಣ ಪರಿಹಾರವಲ್ಲ ಎಂಬ ಮಾತನ್ನೂ ಸುಪ್ರೀಮ್ ಕೋರ್ಟ್ ಈ ಹಿಂದೆ ಆಡಿದೆ. ದ್ವೇಷ ಭಾಷಣ ಮಾಡುವವರ ಮೇಲೆ ಔಪಚಾರಿಕ ದೂರಿಗಾಗಿ ಕಾಯದೆ, ನೇರವಾಗಿ ಎಫ್.ಐ.ಆರ್.ದಾಖಲಿಸಬೇಕೆಂದು ಪೊಲೀಸರಿಗೆ 2022ರ ಅಕ್ಟೋಬರ್ ತಿಂಗಳಲ್ಲಿ ನಿರ್ದೇಶನ ನೀಡಿತ್ತು. ಎಫ್.ಐ.ಆರ್. ದಾಖಲಿಸದೆ ಹೋದರೆ ನ್ಯಾಯಾಂಗ ನಿಂದನೆಯನ್ನು ಎದುರಿಸಬೇಕಾದೀತು ಎಂಬ ಎಚ್ಚರಿಕೆಯನ್ನೂ ನೀಡಿತ್ತು. ಆದರೆ ಸರ್ಮಾ ಅವರೇ ಮುಖ್ಯಮಂತ್ರಿ. ಹೀಗಿದ್ದಾಗ ವಿಡಿಯೋ ಮಾಡಿರುವವರ ವಿರುದ್ಧ ಎಫ್.ಐ.ಆರ್. ದಾಖಲಿಸುವ ನಿರೀಕ್ಷೆಗೆ ಆಧಾರವೇ ಇಲ್ಲ. ಇಂತಹ ಸ್ಥಿತಿಯಲ್ಲಿ ತನ್ನ ಮುಖ್ಯಮಂತ್ರಿಯನ್ನು ಹದ್ದುಬಸ್ತಿನಲ್ಲಿಡುವುದು ಭಾರತೀಯ ಜನತಾ ಪಾರ್ಟಿಯ ಹೊಣೆಗಾರಿಕೆ. ರಾಜಧರ್ಮವನ್ನು ಪಾಲಿಸಬೇಕು ಎಂದು ಅಂದಿನ ಪ್ರಧಾನಿ ವಾಜಪೇಯಿ ಅವರು, ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರಿಗೆ ಪತ್ರಿಕಾಗೋಷ್ಠಿಯಲ್ಲಿ ಬಹಿರಂಗವಾಗಿ ಬುದ್ಧಿ ಹೇಳಿದ್ದರು. ಅದೇ ನರೇಂದ್ರ ಮೋದಿಯವರೇ ಈಗ ಪ್ರಧಾನಮಂತ್ರಿಯಾಗಿದ್ದಾರೆ. ಅವರ ಆಪ್ತ ಸಹವರ್ತಿ ಅಮಿತ್ ಶಾ ಅವರೇ ದೇಶದ ಗೃಹಮಂತ್ರಿಯಾಗಿದ್ದಾರೆ. ಇವರಿಬ್ಬರೂ ಕೇಂದ್ರ ಸರ್ಕಾರ ಮಾತ್ರವಲ್ಲದೆ ಭಾರತೀಯ ಜನತಾ ಪಾರ್ಟಿಯನ್ನು, ರಾಜ್ಯ ಬಿಜೆಪಿ ಸರ್ಕಾರಗಳನ್ನು ತಮ್ಮ ಉಕ್ಕಿನ ಮುಷ್ಠಿಯಲ್ಲಿ ಇರಿಸಿಕೊಂಡಿದ್ದಾರೆ.

ಗಿರೀಶ ಜೋಶಿ ನಿಧನ ಪತ್ರಕರ್ತ ಸಂಘದಿಂದ ಸಂತಾಪ


ಮಾನ್ವಿ ಫೆ.11-

ಹಿರಿಯ ವರದಿಗಾರರಾದ ಗಿರೀಶ ಜೋಶಿ ನಿಧನ ಹೊಂದಿದ ಹಿನ್ನೆಲೆ ಮಾನ್ವಿ ಪತ್ರಕರ್ತ ಸಂಘದ ವತಿಯಿಂದ ಶ್ರದಾಂಜಲಿ ಸಲ್ಲಿಸಲಾಯಿತು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದ ಶ್ರದಾಂಜಲಿ ಸಭೆಯಲ್ಲಿ ಮೃತರಾದ ಹಿರಿಯ ವರದಿಗಾರರಾದ ಗಿರೀಶ ಜೋಶಿಯವ ಆತ್ಮಕ್ಕೆ ಶಾಂತಿ ಕೋರಿ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷರಾದ ಅಶೋಕ ತಡಕಲ್, ಪ್ರಧಾನ ಕಾರ್ಯದರ್ಶಿ ರವಿನಾಯಕ ಆಲ್ದಾಳ್, ಜಿಲ್ಲಾ ಕಾರ್ಯದರ್ಶಿ ಬಸವರಾಜ ಬೋಗಾವತಿ, ಜಿಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರಾದ ತಾಯಪ್ಪ ಬಿ.ಹೊಸೂರು, ಹಿರಿಯ ಪತ್ರಕರ್ತರಾದ ಹನುಮಂತಪ್ಪ ಕೊಟ್ನೇಕಲ್, ಪಿ.ಪರಮೇಶ, ರಾಮಾಂಜನಯ್ಯ,ಮಾರೆಪ್ಪ ದೊಡ್ಡಮನಿ, ವಿಜಯ ಕುಮಾರ, ನಾಗರಾಜ ತಡಕಲ್, ಜಿತೇಂದ್ರಸ್ವಾಮಿ, ಶಿವಕುಮಾರ್ ಜಗ್ಲಿ, ಸೈಯಾದ ಅಬ್ದುಲ್ ಗಯಾಸ್,ರಾಜಶೇಖರ, ಹುಸೇನಪ್ಪ ನಂದಿಹಾಳ, ಗಿರಿನಾಯಕ, ಶ್ರೀನಿವಾಸ, ರಾಜಶೇಖರ ಸ್ವಾಮಿ, ಮೈನುದ್ದೀನ್ ಹುಸೇನ ಭಾಷ ನಕ್ಕುಂದಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಟಿ20 ವಿಶ್ವಕಪ್ ಪಾಕ್ ಬಹಿಷ್ಕಾರಕ್ಕೆ ಬಾಂಗ್ಲಾ ಬ್ರೇಕ್; ಪಿಸಿಬಿ ಮಣಿದಿದ್ದು ಯಾರ ಒತ್ತಡಕ್ಕೆ?



ಅಂತಿಮವಾಗಿ ಕ್ರಿಕೆಟ್ ಜಗತ್ತಿನಲ್ಲಿ ''ದುಡ್ಡಿದ್ದವನೇ ದೊಡ್ಡಪ್ಪ'' ಎಂಬ ಸಂದೇಶವನ್ನು ರವಾನಿಸಿದೆ. ಐಸಿಸಿ ಎಂಬುದು ಕೇವಲ ಹೆಸರಿಗೆ ಮಾತ್ರ ಇರುವ ಸಂಸ್ಥೆ, ಅದರ ಸೂತ್ರಧಾರಿ ಬಿಸಿಸಿಐ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಪಾಕಿಸ್ತಾನದಂತಹ ರಾಷ್ಟ್ರಗಳು ತಮ್ಮ ಹಕ್ಕುಗಳಿಗಾಗಿ ಎಷ್ಟೇ ಬಲವಾಗಿ ವಾದಿಸಿದರೂ, ಆರ್ಥಿಕ ಶಕ್ತಿಯ ಮುಂದೆ ಅದೆಲ್ಲವೂ ನಿಷ್ಪ್ರಯೋಜಕ ಎಂಬ ಕಟು ಸತ್ಯ ಅನಾವರಣಗೊಂಡಿದೆ

ಪ್ರತಿಷ್ಠಿತ ಟಿ20 ವಿಶ್ವಕಪ್ ಟೂರ್ನಿಯ ಹೊಸ್ತಿಲಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರಿಕೆಟ್ ಸಮರ ತಾರಕಕ್ಕೇರಿತ್ತು. ಭಾರತದ ವಿರುದ್ಧದ ಪಂದ್ಯಗಳನ್ನು ಬಹಿಷ್ಕರಿಸುವುದಾಗಿ ಬೆದರಿಕೆ ಹಾಕಿದ್ದ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ತಂತ್ರಕ್ಕೆ ಇದೀಗ ಅನಿರೀಕ್ಷಿತ ತಿರುವು ಸಿಕ್ಕಿದೆ. ತನ್ನದೇ ಒಕ್ಕೂಟದ ರಾಷ್ಟ್ರಗಳಿಂದ ಬೆಂಬಲ ನಿರೀಕ್ಷಿಸಿದ್ದ ಪಾಕಿಸ್ತಾನಕ್ಕೆ, ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಬರೆದ ಪತ್ರವೊಂದು ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು ಪಾಕಿಸ್ತಾನಕ್ಕೆ ಬರೆದಿದೆ ಎನ್ನಲಾದ ಪತ್ರದ ಪ್ರತಿಯು ಲಭ್ಯವಾಗಿದ್ದು, ಅದರಲ್ಲಿರುವ ಅಂಶಗಳು ಪಾಕಿಸ್ತಾನದ ಪಾಲಿಗೆ ವಾಸ್ತವದ ಕನ್ನಡಿ ಹಿಡಿದಿವೆ. ''ಭಾವನೆಗಳಿಗಿಂತ ಮಂಡಳಿಯ ಆರ್ಥಿಕ ಉಳಿವು ಮುಖ್ಯ'' ಎಂದು ಬಾಂಗ್ಲಾ ಮಂಡಳಿ ಪಾಕಿಸ್ತಾನಕ್ಕೆ ಕಿವಿಮಾತು ಹೇಳಿದೆ. ಭಾರತದ ವಿರುದ್ಧ ಆಡದಿದ್ದರೆ ಆಗುವ ಆರ್ಥಿಕ ನಷ್ಟವನ್ನು ಭರಿಸುವ ಶಕ್ತಿ ಯಾರಿಗೂ ಇಲ್ಲ ಎಂಬುದನ್ನು ಬಾಂಗ್ಲಾ ಎಳೆಎಳೆಯಾಗಿ ಬಿಚ್ಚಿಟ್ಟಿದೆ.

ಪತ್ರದ ಮುಖ್ಯಾಂಶಗಳ ಪ್ರಕಾರ, ''ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯವೇ ಈ ಟೂರ್ನಿಯ ಆರ್ಥಿಕ ಜೀವಾಳ. ಒಂದು ವೇಳೆ ಪಾಕಿಸ್ತಾನವು ಹಠಕ್ಕೆ ಬಿದ್ದು ಈ ಪಂದ್ಯವನ್ನು ಬಹಿಷ್ಕರಿಸಿದರೆ, ಪ್ರಸಾರ ಹಕ್ಕುಗಳಿಂದ ಬರುವ ಆದಾಯದಲ್ಲಿ ಭಾರಿ ಕಡಿತವಾಗಲಿದೆ. ಐಸಿಸಿ ಆದಾಯವನ್ನೇ ನಂಬಿಕೊಂಡಿರುವ ನಮ್ಮಂತಹ (ಬಾಂಗ್ಲಾದೇಶ, ಶ್ರೀಲಂಕಾ) ಮಂಡಳಿಗಳಿಗೆ ಇದು ಕಠಿಣ ಕ್ರಮವಾಗಲಿದೆ. ಹೀಗಾಗಿ, ದಯವಿಟ್ಟು ಹಠ ಬಿಡಿ ಮತ್ತು ಭಾರತದ ವಿರುದ್ಧ ಆಡಲು ಒಪ್ಪಿಕೊಳ್ಳಿ'' ಎಂದು ಬಾಂಗ್ಲಾ ಆಗ್ರಹಿಸಿದೆ.

ಇನ್ನೊಂದೆಡೆ, ಪಾಕಿಸ್ತಾನವು ಭಾರತದ ವಿರುದ್ಧ ಆಡಲು ಅಥವಾ ಹೈಬ್ರಿಡ್ ಮಾದರಿಗೆ ಒಪ್ಪಲು ಐಸಿಸಿ ಮುಂದೆ ಮೂರು ಕಠಿಣ ಷರತ್ತುಗಳನ್ನು ಇಟ್ಟಿತ್ತು. ಆದರೆ, ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಈ ಮೂರೂ ಷರತ್ತುಗಳನ್ನು ಕಸದ ಬುಟ್ಟಿಗೆ ಹಾಕಿದೆ. ''ಷರತ್ತುಗಳನ್ನು ಹಾಕಿ ಆಟ ಆಡಲು ಇದು ದ್ವಿಪಕ್ಷೀಯ ಸರಣಿಯಲ್ಲ, ಇದು ಐಸಿಸಿ ಟೂರ್ನಿ'' ಎಂದು ಐಸಿಸಿ ಎಚ್ಚರಿಕೆ ನೀಡಿದೆ.

ಐಸಿಸಿ ತಿರಸ್ಕರಿಸಿದ ಪಾಕಿಸ್ತಾನದ ಪ್ರಮುಖ ಬೇಡಿಕೆಗಳೆಂದರೆ ಭವಿಷ್ಯದಲ್ಲಿ ಭಾರತವೂ ಪಾಕಿಸ್ತಾನಕ್ಕೆ ಬರಲೇಬೇಕು ಎಂಬ ಲಿಖಿತ ಭರವಸೆ ನೀಡುವುದು, ಹೈಬ್ರಿಡ್ ಮಾದರಿಯಿಂದಾಗುವ ನಷ್ಟವನ್ನು ಐಸಿಸಿಯೇ ಭರಿಸುವುದು, ಟೂರ್ನಿಯ ಫೈನಲ್ ಪಂದ್ಯವನ್ನು ಯಾವುದೇ ಕಾರಣಕ್ಕೂ ಬದಲಿಸದಿರುವುದು. ಈ ಎಲ್ಲ ಬೇಡಿಕೆಗಳನ್ನು ಐಸಿಸಿ ''ಅಪ್ರಾಯೋಗಿಕ'' ಎಂದು ತಳ್ಳಿಹಾಕಿದೆ.

ಈ ಇಡೀ ಬೆಳವಣಿಗೆಯ ಹಿಂದೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಹೊಂದಿರುವ ''ಹಣದ ಬಲ'' ಸ್ಪಷ್ಟವಾಗಿ ಗೋಚರಿಸುತ್ತಿದೆ. ವಿಶ್ವ ಕ್ರಿಕೆಟ್‌ನ ಆದಾಯದ ಸಿಂಹಪಾಲು ಭಾರತದಿಂದಲೇ ಬರುತ್ತಿರುವುದರಿಂದ, ಐಸಿಸಿ ಕೂಡ ಬಿಸಿಸಿಐ ನಿರ್ಧಾರಗಳಿಗೆ ತಲೆಬಾಗುವುದು ಅನಿವಾರ್ಯವಾಗಿದೆ. ಐಸಿಸಿ ಸ್ವತಂತ್ರ ಸಂಸ್ಥೆಯಾಗಿದ್ದರೂ, ಅದರ ನಿರ್ಧಾರಗಳು ಪರೋಕ್ಷವಾಗಿ ಭಾರತದ ಹಿತಾಸಕ್ತಿಯನ್ನೇ ಕಾಪಾಡುತ್ತಿವೆ ಎಂಬ ಆರೋಪಕ್ಕೆ ಈ ಘಟನೆ ಪುಷ್ಠಿ ನೀಡಿದೆ.

ಬಿಸಿಸಿಐನ ಪ್ರತಿಯೊಂದು ನಡೆಯ ಹಿಂದೆಯೂ ಭಾರತದ ಆಡಳಿತಾರೂಢ ಬಿಜೆಪಿ ಸರ್ಕಾರದ ರಾಜಕೀಯ ನಿಲುವುಗಳಿವೆ ಎಂಬುದು ಜಗಜ್ಜಾಹೀರು. ಗಡಿಯಾಚೆಗಿನ ಭಯೋತ್ಪಾದನೆ ಕಾರಣದಿಂದ ಪಾಕಿಸ್ತಾನದೊಂದಿಗೆ ಯಾವುದೇ ಸಂಬಂಧ ಬೇಡ ಎಂಬುದು ಸರ್ಕಾರದ ನೀತಿ. ಹೀಗಾಗಿ, ಕ್ರಿಕೆಟ್ ಮೈದಾನದಲ್ಲೂ ರಾಜಕೀಯದ ಆಟ ಜೋರಾಗಿಯೇ ನಡೆಯುತ್ತಿದೆ. ಕ್ರೀಡೆ ಮತ್ತು ರಾಜಕೀಯ ಬೇರೆ ಬೇರೆ ಎಂಬ ತತ್ವ ಇಲ್ಲಿ ಸಂಪೂರ್ಣವಾಗಿ ಗೌಣವಾಗಿದೆ.

ಬಾಂಗ್ಲಾದೇಶದ ಪತ್ರದ ಒತ್ತಡ ಮತ್ತು ಐಸಿಸಿಯ ಕಠಿಣ ನಿಲುವಿನಿಂದಾಗಿ ಪಾಕಿಸ್ತಾನ ಈಗ ಇಕ್ಕಟ್ಟಿಗೆ ಸಿಲುಕಿದೆ. ''ಮುಂದೆ ಹೋದರೆ ಹಳ್ಳ, ಹಿಂದೆ ಬಂದರೆ ಕೊಳ್ಳ'' ಎಂಬ ಸ್ಥಿತಿ ಪಿಸಿಬಿಯದ್ದು. ಭಾರತದ ವಿರುದ್ಧ ಆಡದಿದ್ದರೆ ಟೂರ್ನಿಯಿಂದಲೇ ಹೊರಬೀಳಬೇಕಾಗುತ್ತದೆ, ಜೊತೆಗೆ ಐಸಿಸಿ ಅನುದಾನವೂ ಸ್ಥಗಿತಗೊಳ್ಳುತ್ತದೆ. ಇದು ಆರ್ಥಿಕ ಸಂಕಷ್ಟದಲ್ಲಿರುವ ಪಾಕಿಸ್ತಾನಕ್ಕೆ ಭಾರಿ ಹೊಡೆತ ನೀಡಲಿದೆ. ಹೀಗಾಗಿ, ಪಾಕಿಸ್ತಾನವು ತನ್ನ ಬಿಗಿಪಟ್ಟು ಸಡಿಲಿಸಲು ನಿರ್ಧರಿಸಿದೆ. ಮಂಡಳಿಯ ಆರ್ಥಿಕ ಹಿತಾಸಕ್ತಿ ಮತ್ತು ನೆರೆಹೊರೆಯ ರಾಷ್ಟ್ರಗಳ (ಬಾಂಗ್ಲಾ, ಶ್ರೀಲಂಕಾ) ಒತ್ತಡಕ್ಕೆ ಮಣಿದು, ಭಾರತದ ವಿರುದ್ಧದ ಪಂದ್ಯವನ್ನಾಡಲು ಪಿಸಿಬಿ ಒಪ್ಪಿಗೆ ಸೂಚಿಸುವ ಸಾಧ್ಯತೆಗಳೇ ಹೆಚ್ಚಿವೆ. ಅವಮಾನವಾದರೂ ಸರಿ, ಮಂಡಳಿ ಉಳಿದರೆ ಸಾಕು ಎಂಬ ತೀರ್ಮಾನಕ್ಕೆ ಪಾಕ್ ಬಂದಂತಿದೆ.

ಈ ಬೆಳವಣಿಗೆಯು ಅಂತಿಮವಾಗಿ ಕ್ರಿಕೆಟ್ ಜಗತ್ತಿನಲ್ಲಿ ''ದುಡ್ಡಿದ್ದವನೇ ದೊಡ್ಡಪ್ಪ'' ಎಂಬ ಸಂದೇಶವನ್ನು ರವಾನಿಸಿದೆ. ಐಸಿಸಿ ಎಂಬುದು ಕೇವಲ ಹೆಸರಿಗೆ ಮಾತ್ರ ಇರುವ ಸಂಸ್ಥೆ, ಅದರ ಸೂತ್ರಧಾರಿ ಬಿಸಿಸಿಐ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಪಾಕಿಸ್ತಾನದಂತಹ ರಾಷ್ಟ್ರಗಳು ತಮ್ಮ ಹಕ್ಕುಗಳಿಗಾಗಿ ಎಷ್ಟೇ ಬಲವಾಗಿ ವಾದಿಸಿದರೂ, ಆರ್ಥಿಕ ಶಕ್ತಿಯ ಮುಂದೆ ಅದೆಲ್ಲವೂ ನಿಷ್ಪ್ರಯೋಜಕ ಎಂಬ ಕಟು ಸತ್ಯ ಅನಾವರಣಗೊಂಡಿದೆ.

ಟಿ20 ವಿಶ್ವಕಪ್‌ನಂತಹ ಮಹತ್ವದ ವೇದಿಕೆಯಲ್ಲಿ ನಡೆಯುತ್ತಿರುವ ಈ ನಾಟಕೀಯ ಬೆಳವಣಿಗೆಗಳು ಅಭಿಮಾನಿಗಳಲ್ಲಿ ಗೊಂದಲ ಮೂಡಿಸಿದ್ದಂತೂ ಸುಳ್ಳಲ್ಲ. ಆದರೆ, ಅಂತಿಮವಾಗಿ ಕ್ರಿಕೆಟ್ ಆಟ ಮುಂದುವರಿಯಲಿದೆ, ಭಾರತ-ಪಾಕ್ ಪಂದ್ಯ ನಡೆಯಲಿದೆ ಎಂಬ ಸುದ್ದಿ ಅಭಿಮಾನಿಗಳಿಗೆ ನಿಟ್ಟುಸಿರು ಬಿಡುವಂತೆ ಮಾಡಿದೆ. ಒಟ್ಟಿನಲ್ಲಿ, ಬಾಂಗ್ಲಾದೇಶದ ಆ ಒಂದು ಪತ್ರ ಪಾಕಿಸ್ತಾನದ ಹಠವನ್ನು ಮುರಿಯುವಲ್ಲಿ ಬ್ರಹ್ಮಾಸ್ತ್ರವಾಗಿ ಕೆಲಸ ಮಾಡಿದೆ. ಬಿಸಿಸಿಐನ ಹಣಕಾಸಿನ ದರ್ಬಾರ್ ಮತ್ತು ಐಸಿಸಿಯ ಅಸಹಾಯಕತೆಯ ನಡುವೆ, ಪಾಕಿಸ್ತಾನವು ಅನಿವಾರ್ಯವಾಗಿ ಶರಣಾಗತಿ ಒಪ್ಪಿಕೊಂಡಿದ್ದು, ಹೈಡ್ರಾಮಾಕ್ಕೆ ತೆರೆ ಬಿದ್ದಿದೆ.

ಬಾಂಗ್ಲಾ ಚುನಾವಣೆ ಹಸೀನಾ ಪಕ್ಷ ಕಣ್ಮರೆ: ಬಿಎನ್‌ಪಿ ಜಮಾಅತೆ ಹೋರಾಟದಲ್ಲಿ ಗೆಲ್ಲುವುದು ಸಹಿಷ್ಣುತೆಯೋ-ಅಸಹನೆಯೋ?



ಚುನಾವಣಾ ಪೂರ್ವ ಸಮೀಕ್ಷೆಗಳ ಪ್ರಕಾರ, ಈ ಬಾರಿಯ ಚುನಾವಣೆಯಲ್ಲಿ ಬಿಎನ್‌ಪಿ ಸ್ಪಷ್ಟ ಬಹುಮತದೊಂದಿಗೆ ಮುನ್ನಡೆ ಸಾಧಿಸುವ ಸಾಧ್ಯತೆಗಳಿವೆ. ಆದಾಗ್ಯೂ, ಕೆಲವು ಸರ್ವೆಗಳಲ್ಲಿ ಜಮಾಅತೆ ನೇತೃತ್ವದ ಮೈತ್ರಿಕೂಟ ಅಧಿಕಾರ ರಚಿಸುವ ನಿರೀಕ್ಷೆಯನ್ನು ಹೇಳುತ್ತಿವೆ.

ಬಾಂಗ್ಲಾದೇಶದಲ್ಲಿ ಕಳೆದ ಒಂದೂವರೆ ವರ್ಷದಿಂದ ರಾಜಕೀಯ ಪ್ರಕ್ಷುಬ್ಧತೆ ಮುಂದುವರೆದಿದೆ. 2024ರ ಆಗಸ್ಟ್‌ನಲ್ಲಿ ಭುಗಿಲೆದ್ದ ಜೆನ್ ಝಡ್ ಪ್ರತಿಭಟನೆಯು ಶೇಖ್ ಹಸೀನಾ ಅವರ ಸರ್ಕಾರವನ್ನು ಉರುಳಿಸಿತು. ಹಸೀನಾ ಅವರು ಬಾಂಗ್ಲಾ ತೊರೆದು, ಭಾರತಕ್ಕೆ ಪಲಾಯನ ಮಾಡಿದರು. ಮುಹಮ್ಮದ್ ಯೂನಸ್ ನೇತೃತ್ವದಲ್ಲಿ ಮಧ್ಯಂತರ ಸರ್ಕಾರವೂ ರಚನೆಯಾಯಿತು. ಆದಾಗ್ಯೂ, ಇನ್‌ಕ್ವಿಲಾಬ್ ಮಂಚ್‌ನ ನಾಯಕ ಶರೀಫ್ ಒಸ್ಮಾನ್ ಹಾದಿ ಹತ್ಯೆಯ ಬಳಿಕ ಪ್ರತಿಭಟನೆಗಳು, ಹಿಂಸಾಚಾರಗಳು ಮುಂದುವರೆದಿವೆ. ಉದ್ವಿಗ್ನತೆಯ ನಡುವೆಯೇ ಬಾಂಗ್ಲಾದೇಶ ಚುನಾವಣೆಗೆ ಹೋಗಲು ಸಜ್ಜಾಗುತ್ತಿದೆ. ಫೆಬ್ರವರಿ 12ರಂದು ಮತದಾನ ನಡೆಯಲಿದೆ.

ಸದ್ಯಕ್ಕೆ, ಯೂನಸ್ ಅವರ ಸರ್ಕಾರವು ಹಸೀನಾ ಅವರ ಅವಾಮಿ ಲೀಗ್ ಪಕ್ಷವನ್ನು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿಷೇಧ ಹೇರಿದೆ. ಪಕ್ಷದ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ಪಕ್ಷ ಮತ್ತು ಪಕ್ಷದ ನಾಯಕರು ಕಣ್ಮರೆಯಾದವರಂತೆ ಇದ್ದಾರೆ. ಅವಾಮಿ ಲೀಗ್ ಅನುಪಸ್ಥಿತಿಯಲ್ಲಿ ಚುನಾವಣೆಯು ದ್ವಿಧ್ರುವೀಯ ಸ್ಪರ್ಧೆಯಾಗಿ ಮಾರ್ಪಟ್ಟಿದೆ. ಬಾಂಗ್ಲಾದೇಶ ನ್ಯಾಶನಲ್ ಪಾರ್ಟಿ () ಮತ್ತು ಜಮಾಅತೆ ಇಸ್ಲಾಮಿ ಪಕ್ಷಗಳ ನಡುವೆ ಚುನಾವಣಾ ಹಣಾಹಣಿ ನಡೆಯಲಿದೆ.

ಭಾರತದಲ್ಲಿ ರಕ್ಷಣೆ ಪಡೆದಿರುವ ಹಸೀನಾ ಅವರು ತಮ್ಮ ಪಕ್ಷವನ್ನು ನಿರ್ಬಂಧಿಸಿ ನಡೆಯುತ್ತಿರುವ ಚುನಾವಣೆಯನ್ನು ಟೀಕಿಸಿದ್ದಾರೆ. ಸ್ಪರ್ಧೆಯಿಂದ ಅವಾಮಿ ಲೀಗ್ ಹೊರಗಿರುವ ಕಾರಣ, ಪಕ್ಷ ಲಕ್ಷಾಂತರ ಬೆಂಬಲಿಗರು ಮತದಾನದಿಂದ ದೂರ ಉಳಿಯುವ ಸಾಧ್ಯತೆಯೂ ಇದೆ ಎಂದು ಅವರು ಹೇಳುತ್ತಿದ್ದಾರೆ. ಆದರೆ, ಬಾಂಗ್ಲಾ ಸರ್ಕಾರ ಹೇಳುವಂತೆ, ಕೆಲವು ಸಮೀಕ್ಷೆಗಳ ಪ್ರಕಾರ, ಆಮಾಮಿ ಲೀಗ್‌ನ ಬೆಂಬಲಿಗರು ಬಿಎನ್‌ಪಿ ಮತ್ತು ಜಮಾಅತೆ ಇಸ್ಲಾಮಿ ಕಡೆಗೆ ವಾಲಿದ್ದಾರೆ. ಈ ಪಕ್ಷಗಳನ್ನು ಬೆಂಬಲಿಸಲಾರಂಭಿಸಿದ್ದಾರೆ.

ಈ ಹಿಂದೆ, ಬಿಎನ್‌ಪಿ ಮತ್ತು ಜಮಾಅತೆ ಇಸ್ಲಾಮಿ ಮಿತ್ರಪಕ್ಷಗಳಾಗಿದ್ದವು. ಅವಾಮಿ ಲೀಗ್ ವಿರುದ್ಧ ಜಂಟಿಯಾಗಿ ಸ್ಪರ್ಧಿಸುತ್ತಿದ್ದರು. ಆದರೆ, ಪ್ರಸ್ತುತ ಚುನಾವಣೆಯಲ್ಲಿ ಎರಡೂ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧೆಗಿಳಿಸಿವೆ. ಮುಖಾಮುಖಿಯಾಗಿ ಹೋರಾಟ ನಡೆಸಲಿವೆ. ಅವಾಮಿ ಲೀಗ್ ಅನುಪಸ್ಥಿತಿಯಲ್ಲಿ ಎರಡೂ ಪಕ್ಷಗಳಲ್ಲಿ ಒಬ್ಬರು ಅಧಿಕಾರದ ಗದ್ದುಗೆ ಏರುವುದು ಖಚಿತವೂ ಆಗಿದೆ.

ಗಮನಾರ್ಹವೆಂದರೆ, ಹಸೀನಾ ಆಳ್ವಿಕೆಯಲ್ಲಿ ಜಮಾಅತೆ ಇಸ್ಲಾಮಿ ಪಕ್ಷವು ತೀವ್ರ ದಮನಕ್ಕೊಳಗಾಗಿತ್ತು. ಬಹುತೇಕ ಕಣ್ಮರೆಯೇ ಆಗಿಬಿಟ್ಟಿದೆ ಎಂಬಂತಿತ್ತು. 1971ರ ಸ್ವಾತಂತ್ರ್ಯ ಸಂಗ್ರಾಮದ ವೇಳೆ, ಪಾಕಿಸ್ತಾನಕ್ಕೆ ಸಹಕಾರ ನೀಡಿದ ಆರೋಪದ ಮೇಲೆ ಜಮಾಅತೆಯ ಪ್ರಮುಖ ನಾಯಕರಿಗೆ ಶಿಕ್ಷೆ ವಿಧಿಸಲಾಗಿತ್ತು. ಮಾತ್ರವಲ್ಲದೆ, 2013ರಲ್ಲಿ ಪಕ್ಷವನ್ನೂ ನಿಷೇಧಿಸಲಾಗಿತ್ತು.

ಆದರೆ, 2024ರಲ್ಲಿ ಜನ್ ಝೀ ಯುವಜನರು ನಡೆಸಿದ ಆಂದೋಲನದಲ್ಲಿ ಜಮಾಅತೆಯ ವಿದ್ಯಾರ್ಥಿ ಸಂಘಟನೆ ಬಾಂಗ್ಲಾದೇಶ ಇಸ್ಲಾಮಿ ಛಾತ್ರ ಶಿರ್ಬಿ ಪ್ರಮುಖ ಪಾತ್ರ ವಹಿಸಿತು. ಹಸೀನಾ ಪಲಾಯನ, ಸರ್ಕಾರ ಬದಲಾವಣೆಯ ಬೆಳವಣಿಗೆಗಳ ನಡುವೆಯೇ ಯೂನುಸ್ ಅವರ ಮಧ್ಯಂತರ ಸರ್ಕಾರವು ಜಮಾಅತೆ ಮೇಲಿನ ನಿಷೇಧವನ್ನು ತೆರೆದುಹಾಕಿತು. ನಿಷೇಧ ತೆರವುಗೊಂಡ ಕೆಲವೇ ದಿನಗಳಲ್ಲಿ ಪಕ್ಷವು ಮುನ್ನೆಲೆಗೆ ಬಂದಿತು. ತನ್ನ ಇಮೇಜ್ ಅನ್ನು ಭದ್ರವಾಗಿ ಕಟ್ಟಿಕೊಂಡಿದೆ. ಭ್ರಷ್ಟಾಚಾರ ವಿರೋಧಿ ಪ್ರತಿಭಟನೆ, ಯುವಜನರ ಬೆಂಬಲ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಉತ್ತಮ ಪ್ರಚಾರಗಳೊಂದಿಗೆ ಬಲವಾಗಿ ಹೊರಹೊಮ್ಮಿದೆ. ಡಾ. ಶಫೀಕುರ್ ರಹಮಾನ್ ಅವರು ಪಕ್ಷದ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

ಹಾಲಿ ಚುನಾವಣೆಗಾಗಿ ಜಮಾಅತೆ ಇಸ್ಲಾಮಿಯು ನ್ಯಾಷನಲ್ ಸಿಟಿಜನ್ ಪಾರ್ಟಿ () ಸೇರಿದಂತೆ 11 ಪಕ್ಷಗಳ ಮೈತ್ರಿಕೂಟ ರಚಿಸಿದೆ. ಒಟ್ಟು 350 ಸ್ಥಾನಗಳಲ್ಲಿ ಜಮಾಅತೆ 224ಕ್ಕೂ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಪಕ್ಷವು ಅತ್ಯುತ್ತಮ ಪ್ರದರ್ಶನವನ್ನು ನೀಡುವ ನಿರೀಕ್ಷೆಯಲ್ಲಿದೆ. ಕೆಲವು ಸರ್ವೆಗಳ ಪ್ರಕಾರ, ಕನಿಷ್ಠ 105 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಗಳಿವೆ.

ಇನ್ನು, ಪ್ರಮುಖ ಪ್ರತಿಸ್ಪರ್ಧಿ ಬಿಎನ್‌ಪಿ ತಾರಿಕ್ ರಹಮಾನ್ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತಿದೆ. ರಹಮಾನ್ ಅವರು 17 ವರ್ಷಗಳ ಗಡಿಪಾರು ಬಳಿಕ, ಮತ್ತೆ ಬಾಂಗ್ಲಾ ರಾಜಕಾರಣಕ್ಕೆ ಮರಳಿದ್ದಾರೆ. ಪಕ್ಷವು ಹಳೆಯ ಬೆಂಬಲಿಗರು, ತಳಮಟ್ಟದಿಂದ ಕಾರ್ಯಕರ್ತರನ್ನು ಸಜ್ಜುಗೊಳಿಸಿತ್ತಿದೆ. ಬಿಎನ್‌ಪಿ ಕೂಡ 10 ಪಕ್ಷಗಳ ಮೈತ್ರಿಕೂಟ ರಚಿಸಿದೆ. ಬಹುತೇಕ ಸರ್ವೆಗಳು ಹೇಳುವಂತೆ, ಬಿಎನ್‌ಪಿ ಕನಿಷ್ಠ 208 ಸ್ಥಾನಗಳನ್ನು ಗೆಲ್ಲಬಹುದು. ತಾರಿಕ್ ರಹಮಾನ್ ಅವರು ಸೌಹಾರ್ದ ರಾಷ್ಟ್ರ, ಅಲ್ಪಸಂಖ್ಯಾತರ ಸುರಕ್ಷತೆ, ನ್ಯಾಯ ವ್ಯವಸ್ಥೆಯ ಪುನಃಸ್ಥಾಪನೆ ಹಾಗೂ ಭ್ರಷ್ಟಾಚಾರ ನಿರ್ಮೂಲನೆಯ ಕುರಿತು ಭರವಸೆಗಳನ್ನು ನೀಡುತ್ತಿದ್ದಾರೆ.

ಅಲ್ಪಸಂಖ್ಯಾತರು, ವಿಶೇಷವಾಗಿ, ಬಾಂಗ್ಲಾ ಜನಸಂಖ್ಯೆಯ ಸುಮಾರು 10%ರಷ್ಟಿರುವ ಹಿಂದುಗಳು ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ. ಹಸೀನಾ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಹೆಚ್ಚಿವೆ ಎಂಬ ಆರೋಪಗಳಿದ್ದವು. ಸರ್ಕಾರದ ವಿರುದ್ಧದ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ ಬಿಎನ್‌ಪಿ ಧಾರ್ಮಿಕ ಸಹಿಷ್ಣುತೆ ಮತ್ತು ಸೌಹಾರ್ದ ರಾಷ್ಟ್ರದ ಕುರಿತು ಹೆಚ್ಚು ಮಾತನಾಡುತ್ತಿತ್ತು. ಹೀಗಾಗಿ, ಬಹುತೇಕ ಹಿಂದುಗಳು ಮತ್ತು ಅಲ್ಪಸಂಖ್ಯಾತರು ಬಿಎನ್‌ಪಿಯನ್ನು ಬೆಂಬಲಿಸುತ್ತಿದ್ದಾರೆ.

ಮತ್ತೊಂದೆಡೆ, ಜಮಾಅತೆ ಇಸ್ಲಾಮಿಯು ಇಸ್ಲಾಮಿಕ್ ಧೋರಣೆಗಳನ್ನು ಪ್ರತಿಪಾದಿಸುತ್ತಿದೆ. ಪರಿಣಾಮ, ಹಿಂದುಗಳು ಸೇರಿದಂತೆ ಅಲ್ಪಸಂಖ್ಯಾತರು ಜಮಾಅತೆ ವಿಚಾರದಲ್ಲಿ ಭಯಭೀತರಾಗಿದ್ದಾರೆ. ಆದರೂ, ಅಲ್ಪಸಂಖ್ಯಾತ ಮತಗಳನ್ನು ಸೆಳೆಯಲು ಪ್ರಯತ್ನಿಸುತ್ತಿರುವ ಜಮಾಅತೆ, ಮೊದಲ ಬಾರಿಗೆ ಒಬ್ಬ ಹಿಂದು ಅಭ್ಯರ್ಥಿ ಕೃಷ್ಣ ನಂದಿ ಅವರನ್ನು ಖುಲ್ನಾ ಕ್ಷೇತ್ರದಿಂದ ಕಣಕ್ಕಿಳಿಸಿದೆ. ಇನ್ನು, ಶಫೀಕುರ್ ರಹಮಾನ್ ಅವರು ಎಲ್ಲ ಧರ್ಮಗಳಿಗೆ ಸುರಕ್ಷಿತ ರಾಷ್ಟ್ರ ಬಾಂಗ್ಲಾದೇಶ. ಜಮಾಅತೆ ಅಧಿಕಾರಕ್ಕೆ ಬಂದರೆ ಯಾವುದೇ ಹಿಂದು ಬಾಂಗ್ಲಾದೇಶ ತೊರೆಯಬೇಕಾಗಿಲ್ಲ ಎಂದು ಭರವಸೆ ನೀಡಿದ್ದಾರೆ. ಬಿಎನ್‌ಪಿಯ ದೀರ್ಘಕಾಲದ ಸಹಬಾಳ್ವೆಯ ಪ್ರತಿಪಾದನೆ ಮತ್ತು ಜಮಾಅತೆಯ ಹೊಸ ಭರವಸೆಗಳು ಹಿಂದು ಮತಗಳ ಒಡಕಿಗೆ ಕಾರಣವಾಗಬಹುದು ಎಂದು ವಿಶ್ಲೇಷಕರು ಹೇಳುತ್ತಾರೆ.

ಚುನಾವಣಾ ಪೂರ್ವ ಸಮೀಕ್ಷೆಗಳ ಪ್ರಕಾರ, ಈ ಬಾರಿಯ ಚುನಾವಣೆಯಲ್ಲಿ ಬಿಎನ್‌ಪಿ ಸ್ಪಷ್ಟ ಬಹುಮತದೊಂದಿಗೆ ಮುನ್ನಡೆ ಸಾಧಿಸುವ ಸಾಧ್ಯತೆಗಳಿವೆ. ಆದಾಗ್ಯೂ, ಕೆಲವು ಸರ್ವೆಗಳಲ್ಲಿ ಜಮಾಅತೆ ನೇತೃತ್ವದ ಮೈತ್ರಿಕೂಟ ಅಧಿಕಾರ ರಚಿಸುವ ನಿರೀಕ್ಷೆಯನ್ನು ಹೇಳುತ್ತಿವೆ.

ಈ ಚುನಾವಣೆಯ ಫಲಿತಾಂಶವು ಬಾಂಗ್ಲಾದೇಶದ ಭವಿಷ್ಯವನ್ನು ನಿರ್ಧರಿಸಲಿದೆ. ಬಾಂಗ್ಲಾದೇಶವು ಬಿಎನ್‌ಪಿ ಗೆಲುವಿನೊಂದಿಗೆ ಸಾಂಪ್ರದಾಯಿಕ ಧಾರ್ಮಿಕ ಸಹಿಷ್ಣುತೆಯ ರಾಜಕೀಯಕ್ಕೆ ಮರಳುವುದೋ ಅಥವಾ ಜಮಾಅತೆ ಜಯದೊಂದಿಗೆ ಇಸ್ಲಾಮಿಕ್ ಪ್ರಭಾವ ಹೆಚ್ಚುವುದೋ ಅಥವಾ ಯುವಜನರ ಆಂದೋಲನದ ಪರಿಣಾಮಗಳು ಮುಂದು ವರಿಯುವುದೋ ಕಾದು ನೋಡಬೇಕಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR